మనసు

1993

ಮಾನಸಿ

ತಿಂಗಳ ಪತ್ರಿಕೆ ಜನವರಿ 1993

★ ನಿರ್ಭಾಗ್ಯೆ

★ ಪ್ರಾಂತೀಯ ಮಹಿಳಾ ಸಮಾವೇಶ

★ ಕೇವಲ ಪುರುಷರಿಗೆ ಮಾತ್ರ

★ ಸ್ತ್ರೀ ಸಂಚಯ

★ ಬೇಡದ ಹೆಣ್ಣು ಮಗುವನ್ನು
ನಮ್ಮ ಮಡಿಲಿಗೆ ಹಾಕಿ

ಮಾನಸ

ಸಂಪುಟ : ೧೩ ಸಂಚಿಕೆ : ೧೩

ಜನವರಿ - ೧೯೯೩

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು–560 067

ಬಿಡಿ ಪ್ರತಿ : **2-50 ರೂ.**


ಸೂಚನೆ : ವಾರ್ಷಿಕ ಚಂದಾ : **25 ರೂ.**

ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ.ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



ಸಂಪಾದಕೀಯ

ಡಿಸಂಬರ್ ಆರರ ನೀಚ ಕೃತ್ಯ ಮತ್ತು ಆ ನಂತರದ ಬೆಳವಣಿಗೆಗಳನ್ನು ಗಮನಿಸುವಾಗ ಪರಿಸ್ಥಿತಿಯಲ್ಲಿ ಭರವಸೆಯೇ ಇಲ್ಲದೇ ಹೋಗುತ್ತಿರುವುದು ಒಂದು ಬಗೆಯ ಭಯ ಹುಟ್ಟಿಸುತ್ತದೆ. ರಾಜ್ಯಾಂಗದ ಬೆಚ್ಚನೆಯ ರಕ್ಷಣೆಯಲ್ಲಿ ಕೆಟ್ಟ ಕೋಮುವಾದೀ ಶಕ್ತಿಗಳೇ ಮೇಲುಗೈ ಸಾಧಿಸುತ್ತಿರುವುದು ಭವಿಷ್ಯತ್ತಿನಲ್ಲಿ ನಿರೀಕ್ಷಿಸಬಹುದಾದ ಕರಾಳತೆಯ ಛಾಯೆಯನ್ನು ಸ್ಪಷ್ಟ ಮೂಡಿಸುತ್ತಿದೆ. 1949ರ ನಂತರದಿಂದಲೂ ಹಿಂದೂ ಕೋಮುವಾದವು ರಾಜ್ಯಾಂಗದ ಮೇಲೆ ಒತ್ತಡ ಹೇರುತ್ತಲೇ ಬಂದಿದೆ ಮತ್ತು ಪ್ರತಿ ಹೆಜ್ಜೆಯಲ್ಲೂ ರಾಜ್ಯಾಂಗ ಅದನ್ನು ಪೋಷಿಸಿದೆ/ಕುಮ್ಮಕ್ಕು ಕೊಟ್ಟಿದೆ. ರಾಜ್ಯಾಂಗದ ಇಂತಹ ಬೆಂಬಲ ಒಂದು ಕಡೆಯಾದರೆ, ಇನ್ನೊಂದು ಕಡೆಯಲ್ಲಿ ಈ ಕೋಮುವಾದೀ ಶಕ್ತಿ ಅಪಾರ ಸಂಖ್ಯೆಯ ಜನಸಮುದಾಯವನ್ನು ತನ್ನೊಳಗೆ ಸೆಳಕೊಳ್ಳುವಲ್ಲಿ ಯಶಸ್ವಿಯಾಗಿದೆ. ಮಂದಿರ ಚಳವಳಿಯಲ್ಲಿ ಸಾಧು-ಸಂತರನ್ನು ನೇಮಿಸಿಕೊಳ್ಳುವ ತಂತ್ರವೇ ಮುಂತಾದವು ಅವರ ಕೃತ್ಯಕ್ಕೆ ಧಾರ್ಮಿಕ Legitamacy ಯನ್ನು ಒದಗಿಸಿ ಜನಮನ್ನಣೆ ಗಳಿಸುವಲ್ಲಿ ತುಂಬಾ ಸಹಾಯವಾಗಿವೆ. ಇದು ಎಂತಹ ಮಟ್ಟ ಮುಟ್ಟುತ್ತದೆಯೆಂದರೆ, ಮಹಾಂತ ಅವೈದ್ಯನಾಥರಾಗಲೀ, ಉಮಾ ಭಾರತೀಯಾಗಲೀ ಕೇವಲ ಧಾರ್ಮಿಕತೆಯ ಬಂಡವಾಳದಿಂದಲೇ ಚುನಾವಣೆಯನ್ನು ಗೆಲ್ಲಬಲ್ಲರು !

ರಾಜಕೀಯವೇ ಹೀಗೆ ಕೋಮುವಾದೀಗೊಳ್ಳುತ್ತಿರುವ ವಿಷಾದಕರ ಸನ್ನಿವೇಶದಲ್ಲಿ ನಾವು ಮಹಿಳೆಯರು ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತೇವೆ ? ಕೋಮುವಾದಕ್ಕೂ ಮಹಿಳೆಯರಿಗೂ ಇರುವ ಸಂಬಂಧವಾದರೂ ಎಂತದ್ದು ? ಮಹಿಳೆಯರ ಹಕ್ಕುಗಳೆಡೆಗೆ, ಒಟ್ಟಾರೆಯಲ್ಲಿ ಮಹಿಳಾ ಪ್ರಶ್ನೆಗೆ ಇದು ಉಂಟು ಮಾಡುವ ಪರಿಣಾಮ ಎಂತದ್ದು ? ಎಂದು ಪ್ರಶ್ನಿಸಿಕೊಂಡು ಮುಂದೆ ಹೋಗಬೇಕಾಗುತ್ತದೆ.

ಮೊದಲನೆಯದಾಗಿ, ದಿನನಿತ್ಯದ ಬದುಕಿನಲ್ಲಿ ಧಾರ್ಮಿಕ ಅಂಶಗಳು/ಅನುಭವಗಳು ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರ ಬದುಕಿನೊಂದಿಗೆ ಹಾಸುಹೊಕ್ಕಾಗಿವೆ, ಕುಟುಂಬ, ಮನೆ-ಮಕ್ಕಳು, ಗಂಡ-ಹೆಂಡತಿ, ಮಹಿಳೆ-ಪುರುಷಇತ್ಯಾದಿ ಸಂಬಂಧಗಳ ಸಂರಚನೆಯ ಆಗುಹೋಗುಗಳಲ್ಲಿ. ಇದನ್ನು ಕಾಯ್ದುಕೊಳ್ಳಲಿಕ್ಕಾಗಿಯೇ ಧಾರ್ಮಿಕತೆಯ ಸಂಬಂಧದ ಮಹಿಳೆಯರಲ್ಲಿನ ಹುಸಿಪ್ರಜ್ಞೆಯನ್ನು ಎಚ್ಚರಿಕೆಯಿಂದ ಪೋಷಿಸಿ-ಬೆಳೆಸಿ ಬಳಸಲಾಗುತ್ತದೆ. ಆದರೆ ಧರ್ಮದೊಂದಿಗಿನ ಪುರುಷರ ಸಂಬಂಧ ಇದಕ್ಕಿಂತ ಭಿನ್ನ ರೀತಿಯಲ್ಲಿದ್ದು ಅದು ಹೆಚ್ಚು ಅಧಿಕಾರ ಮತ್ತು ಹಿಡಿತಕ್ಕೆ ಸಂಬಂಧಿಸಿರುತ್ತದೆ. ಇದು, ಪುರಾಣವನ್ನು ವ್ಯಾಖ್ಯಿಸಿ ರಾಜ್ಯಾಂಗದ ಮೇಲೆ ಅದರ ಛಾಪು ಒತ್ತುವಲ್ಲಿ ಅವರು ಪ್ರಭಾವ ಬೀರುವವರೆಗೂ ಹೋಗುತ್ತದೆ. ಉದಾ : 1772ರಲ್ಲಿ ವಾರನ್‌ಹೇಸ್ಟಿಂಗನು ಹತ್ತು ಮಂದಿ ಹಿಂದೂ ಬ್ರಾಹ್ಮಣರನ್ನು, ಹಿಂದೂ ಧರ್ಮವನ್ನು ಅಭಿವ್ಯಕ್ತಿಸಿ ಅದನ್ನು ಸಿವಿಲ್ ಕೋಡಿನಲ್ಲಿ ಸೇರಿಸಿಕೊಡುವುದಕ್ಕಾಗಿ ನೇಮಿಸಿದ್ದನು.

ಎರಡನೆಯದಾಗಿ, ಮಹಿಳೆಯರನ್ನು ಧರ್ಮ/ಸಂಸ್ಕೃತಿ ಇನ್ನೂ ಮುಂದುವರೆದು ದೇಶದ ಪ್ರತೀಕವನ್ನಾಗಿ ನೋಡಲಾಗುತ್ತದೆ. ಸಂಸ್ಕೃತಿಯಲ್ಲಿನ ಅತ್ಯುತ್ತಮವಾದದ್ದನ್ನು ರಕ್ಷಿಸಿಕೊಂಡು ಹೋಗುವುದು ಮಹಿಳೆಯರ ಹೊಣೆ ಎಂಬಂತೆ ನೋಡಲಾಗಿದೆ. ಸಂಸ್ಕೃತಿಯ ಶುದ್ಧತೆಯನ್ನು/ನಿರ್ಮಲತೆಯನ್ನು ಕಾಯ್ದುಕೊಂಡು ಹೋಗಬೇಕಾದವರು ಮಹಿಳೆಯರೇ ಎಂದು ನಿರೀಕ್ಷಿಸಲಾಗುತ್ತದೆ. ಅನೇಕ ಅಧ್ಯಯನಗಳು, ಮಹಿಳೆಯರ ಪ್ರತಿಮೆಗಳು ದೇಶದ ಕಲ್ಪನೆಯೊಂದಿಗೆ ಹೇಗೆ ಹೊಂದಿಕೊಂಡು ಹೋಗುತ್ತವೆ ಎಂಬುದನ್ನು ತೋರಿಸಿವೆ. ಹಿಂದೂ ಮಹಿಳೆಯ ಸತಿ ಹೋಗುವ ಸಾಮರ್ಥ್ಯ ಸ್ವತಂತ್ರ ಹೋರಾಟದ ಸಮಯದಲ್ಲಿ ಹೀಗೆ ಪ್ರಕಟಗೊಂಡಿದೆ- “ಈ ನಾಡಿನ ಯಃಕಶ್ಚಿತ್ ಹೆಂಗಸೇ ಗಂಡನ ಪಕ್ಕ ಉರಿಯುವ ಚಿತೆಯಲ್ಲಿ ನಗುನಗುತ್ತಾ ಮಲಗುತ್ತಾಳೆಂದರೆ ಭಾರತ ಹೆದರಬೇಕಾಗಿರುವುದಾದರೂ ಯಾತಕ್ಕೆ ?” ಹಾಗೆಯೇ ಹಿಂದೂ ವಿಧವೆ ಅಗ್ನಿ ಸಂಸ್ಕಾರಕ್ಕೆ ಒಳಗಾಗುವುದನ್ನು ತಪ್ಪಿಸುವುದು ಸಂಪ್ರದಾಯದ ಮೇಲಿನ ದಾಳಿ ಮತ್ತು ಹಿಂದೂತ್ವಕ್ಕೆ ಉಂಟಾಗುವ ಬೆದರಿಕೆಯೆಂಬಂತೆ ನೋಡಲಾಯಿತು. ಇನ್ನೊಂದೆಡೆ ಶಾಬಾನೂಕೇಸಿನ ಸಂದರ್ಭದಲ್ಲಿ, ಮುಸ್ಲಿಂ ಹೆಂಗಸಿಗೆ ಪರಿಹಾರವನ್ನು ಕೊಡುವುದು ಮುಸ್ಲಿಂ ವೈಯುಕ್ತಿಕ ಕಾನೂನಿನ ಉಲ್ಲಂಘನೆ ಎಂಬಂತೆ ನೋಡಲಾಯಿತು. ಇದಕ್ಕಿಂತ ವಿಕೃತವಾದ ಇನ್ನೊಂದು ಮುಖವಿದೆ : ಇಲ್ಲಿ ಒಂದು ಧರ್ಮದ ಗಂಡಸರು ಇನ್ನೊಂದು ಧರ್ಮದವರ ಮುಂದೆ ತಮ್ಮ ಧರ್ಮದ ಪೌರುಷ/ಪುರುಷತ್ವಗಳನ್ನು ತೋರಿಸಿಕೊಳ್ಳಬೇಕಾದರೆ, ಆ ಧರ್ಮದವರ ಹೆಂಗಸರ ಮೇಲೆ ಅತ್ಯಾಚಾರ ಮಾಡುವುದು ! ಇದಕ್ಕೆ ವಿಪುಲ ಉದಾಹರಣೆಗಳಿವೆ,

ಮೂರನೆಯದಾಗಿ, ರಾಜ್ಯಾಂಗದ ಅಂಗರಚನೆಯಲ್ಲಿಯೇ ಪಿತೃಪ್ರಧಾನ ಆಸಕ್ತಿಗಳ ವ್ಯವಸ್ಥಿತ ಪ್ರಾತಿನಿಧಿತ್ಯ ಇದೆ. ಶಾ ಬಾನೂ ಕೇಸಿನಲ್ಲಿ ರಾಜ್ಯಾಂಗ ಕೋಮು ಐಡೆಂಟಿಟಿಗಳನ್ನು ಪೋಷಿಸುವ ಪಾತ್ರ ವಹಿಸಿತು. ಯೂನಿಫಾರ್ಮ್ ಸಿವಿಲ್ ಕೋಡ್‌ಗೆ ಬಂದಾಗ ಮಹಿಳಾ ಹಕ್ಕುಗಳ ಸಮಸ್ಯೆಗಳು ಕೋಮುವಾದೀಗೊಂಡವು. ರಾಜ್ಯಾಂಗ ಬೆಂಬಲಿಸುವ ಮೂಲ ಭೂತವಾದ, ಮಹಿಳೆಯರ ಮೇಲೆ ಮನೆತನ ಹೊಂದಿದ್ದ ಅಧಿಕಾರವನ್ನು ಸಮುದಾಯದ ಯಾವುದೇ ಗಂಡಸು ಚಲಾಯಿಸಲು ಸಾಧ್ಯವಾಗುವಂತೆ ಮಾಡಿಬಿಡುತ್ತದೆ.

ಇನ್ನು ಕೋಮುವಾದಿ ಗುಂಪುಗಳ ಸ್ವರೂಪವನ್ನು ನೋಡಿದಾಗ, ಅವು ಸಂಪೂರ್ಣ ಪುರುಷಪರದ್ದೇ ಅಲ್ಲದೇ ಹೋದರೂ ಸಂಪೂರ್ಣ ಪುರುಷ ಪ್ರಾಬಲ್ಯ/ಪುರುಷ ಮನಸ್ಸಿನವು ಎಂಬುದು ಸ್ಪಷ್ಟ. ಮೂಲಭೂತವಾದಿಗಳು ಮನೆಯ ಹೊರಗೆ ಮಹಿಳೆಯರ ಪಾತ್ರವಿರುವುದನ್ನು ವಿರೋಧಿಸುವರಾದರೂ, ತಮ್ಮ ರಾಜಕೀಯದಲ್ಲಿ ಮಾತ್ರ ಅವರನ್ನು ಬಳಸಿಕೊಳ್ಳುತ್ತಾರೆ. ಮಸೀದಿ ಉರುಳುತ್ತಿದ್ದಂತೇ ಹುಚ್ಚೆದ್ದು ಕುಣಿದ ಉಮಾಭಾರತಿ, ಸಾಧ್ವಿ ರಿತಾಂಬರೆಯರು ಇತ್ತೀಚಿನ ವರ್ಷಗಳಲ್ಲಿ ತುಂಬಾ ಉಗ್ರರೀತಿಯ ಕೋಮುವಾದಿ, ಮೂಲಭೂತವಾದೀ ಪಾತ್ರಗಳನ್ನು ವಹಿಸಿದ್ದಾರೆ. 10ನೇ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಇವರು BJP ಗೆ ದೊಡ್ಡ ರೀತಿಯ ಪ್ರಚಾರ ಮಾಡಿದರು. BJP, VHP, ಬಜರಂಗ ದಳಗಳು ಬಲಿಷ್ಟ ಮಹಿಳಾ ಶಾಖೆಗಳನ್ನು ಹೊಂದಿವೆ. ಇಲ್ಲಿನಮಹಿಳೆಯರು ತಮ್ಮ ಸ್ವಂತ ಆಸಕ್ತಿಗೆ ವಿರುದ್ಧವಾಗಿ ಮೂಲಭೂತವಾದೀಗಳು ತಮ್ಮನ್ನು ಬಳಸಿಕೊಳ್ಳುತ್ತಿರುವ ಯಾವುದೇ ಅರಿವನ್ನೂ

ಹೊಂದಿಲ್ಲ. ಇನ್ನೂ ಮುಂದುವರೆದು ಸ್ತ್ರೀ-ವಿರೋಧಿ ವಿಚಾರಗಳನ್ನು ಸಾರಾಸಗಟಾಗಿ ಹೇಳುತ್ತಾ, ಕೋಮುವಾದಿಗಳ ಪುರುಷ ಪ್ರಾಬಲ್ಯವನ್ನು ಪೋಷಿಸುತ್ತಾರೆ. ಸಾರ್ವಜನಿಕವಾಗಿ ಸತೀಯನ್ನು ಸಮರ್ಥಿಸಿಕೊಂಡ ವಿಜಯರಾಜೇ ಸಿಂಧ್ಯೆ ಪಳಗಿದ ಪ್ರಭಾವಶಾಲಿ ರಾಜಕಾರಣಿ. ಇದೂ ಅಲ್ಲದೆ, BJP, VHPಗಳು ತಮ್ಮ ಮಹಿಳೆಯರನ್ನು ಕೋಮುಗಲಭೆಗಳಲ್ಲಿ ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿವೆ. ಅಹಮದಾಬಾದಿನ ಕೋಮು ಗಲಭೆಗಳಲ್ಲಿ ಮಹಿಳೆಯರು ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುವ ಕೆಲಸ ಮಾಡಿದರು. ಮಹಿಳೆಯರ ಧರ್ಮ ಶ್ರದ್ಧೆಯನ್ನು ಇವರು ಯಾವುದೇ ಶ್ರಮವಿಲ್ಲದೆ ಕೋಮುವಾದೀ ಪ್ರಜ್ಞೆಯಾಗಿ ಮಾರ್ಪಡಿಸಿ ಬಿಡುತ್ತಾರೆ.

ಇಂತಹ ಹಿನ್ನೆಲೆಯಲ್ಲಿ ಮಹಿಳೆಯರು ಇದಕ್ಕೆ ಪ್ರತಿಕ್ರಿಯಿಸಬೇಕಾದ ಮೊಟ್ಟಮೊದಲ ರೀತಿಯೆಂದರೆ ಧಾರ್ಮಿಕತೆಯ ಹುಸಿ ಪ್ರಜ್ಞೆಗೆ ಪರ್ಯಾಯವಾದ ಜಾಗೃತಿಯನ್ನು ಬೆಳೆಸಿಕೊಳ್ಳಬೇಕಾಗಿರುವುದು. ಧರ್ಮ-ಸಂಸ್ಕೃತಿಯ ಪ್ರತೀಕವಾಗಿ ಬಳಸಿಕೊಳ್ಳಲಾಗುತ್ತಿರುವ ಮಹಿಳೆಯರನ್ನು ದಮನಿಸುವ ಪ್ರತೀಕಗಳ ವಿರುದ್ಧ ಸಂಘಟಿತ–ವ್ಯವಸ್ಥಿತ ಹೋರಾಟ ನಡೆಸುವುದು ಮತ್ತು ಸ್ತ್ರೀ ವಿರೋಧೀ ರಾಜ್ಯಾಂಗವನ್ನು ನಿಗ್ರಹಿಸಬಲ್ಲ ಶಕ್ತಿಯಾಗಿ ಬೆಳೆಯುವುದು.

ಓದುಗರ ಗಮನಕ್ಕೆ

ಫೆಬ್ರುವರಿ ಮತ್ತು ಮಾರ್ಚ್ ಸಂಚಿಕೆಗಳನ್ನು ಒಟ್ಟಾಗಿ ವಿಶೇಷ ಸಂಚಿಕೆಯಾಗಿ ಮಾರ್ಚ್‌ನಲ್ಲಿ ತರುತ್ತಿದ್ದೇವೆ. ಈ ವಿಶೇಷ ಸಂಚಿಕೆಯು ನಮ್ಮ ಸಂದರ್ಭದ ಗಮನಾರ್ಹ ಸ್ತ್ರೀವಾದೀ ಹಾಗೂ ಮಾನವ ಹಕ್ಕುಗಳ ಹೋರಾಟದಲ್ಲಿ ಕ್ರಿಯಾಶೀಲರಾಗಿರುವ **ನಂದಿತಾ ಹಕ್ಸರ್** ಅವರ ಸಂದರ್ಶನ, ಕೋಮುವಾದ, ಮತ್ತು ಮಹಿಳೆ, ಮಹಿಳೆಯರ ಮೇಲಿನ ಹಿಂಸಾಚಾರ, ಮಹಿಳೆ, ಮತ್ತು ಅಭಿವೃದ್ಧಿ, ಮಹಿಳೆ ಮತ್ತು ಸಾಹಿತ್ಯ ಅಲ್ಲದೆ ಇನ್ನು ಅನೇಕ ಲೇಖನಗಳನ್ನು ಒಳಗೊಂಡಿರುತ್ತದೆ. ಹೀಗಾಗಿ ಫೆಬ್ರುವರಿಯ ಸಂಚಿಕೆ ಪ್ರಕಟವಾಗುತ್ತಿಲ್ಲ.

ನಿಭಾರ್ಗ್ಯ

● ಅನ್ಮೃತಾಪ್ರೀತಂ

ಒಲೆಯಲ್ಲಿ ಬೆಂದ ಗರಿಗರಿಯಾದ ಚಪಾತಿ ಆಹ್ವಾನಿಸು ವಂತಿತ್ತು. ತರಕಾರಿಯ ಪಲ್ಯದೊಂದಿಗೆ ಚೂರು ಚಪಾತಿ ಆಗಿದೆ.

ನಾನು, ನನ್ನ ಮಕ್ಕಳು ಜೀರಿದೆವು. "ಪಲ್ಯದೊಳಗೆ ವಿಪರೀತ ಮೆಣಸಿನ ಕಾಯಿ" ಪಲ್ಯ ಬಾಯೊಳಗೆ ಉರಿ ಎಬ್ಬಿಸಿತ್ತು.

"ಸಾಮಾನ್ಯವಾಗಿ ನನ್ನ ಹೋಟಲಿಗೆ ಬರುವವರು ಜಾಟರು" ಹೋಟೆಲಿನವ ಹೇಳಿದ, "ಸುತ್ತಲಿನ ಒಂದು ಮೈಲಿಯೊಳಗೆ ಒಂದೇ ಒಂದು ಹೆಂಡದಂಗಡಿ ಇರುವುದು. ಕುಡಿದಾಗ ಜಾಟರು ಮಸಾಲೆ ಹೆಚ್ಚಿರುವುದನ್ನು ಮೆಚ್ಚು ತ್ತಾರೆ."

"ಜಾಟರು..."

"ಹೌದು ಮಗು ಜಾಟರೆಲ್ಲ ಹೆಂಡ ಇಷ್ಟ ಪಡುತ್ತಾರೆ. ಖೂನಿ ಮಾಡಿದಾಗ ಸರಿಯಾಗಿ ಕುಡಿದು ಅಮಲೇರಿಸಿ ಕೊಳ್ಳುವುದು ಇಷ್ಟ ಅವರಿಗೆ"

"ಭಯಂಕರ !"

"ನಿನ್ನೆಯಷ್ಟೇ ಕೆಲವರು ಖಂಡಾಪಟ್ಟೆ ಕುಡಿದು ಬಂದಿದ್ದರು. ಯಾರೋ ಒಬ್ಬನನ್ನು ಕೊಂದು ಬಂದಿದ್ದ ರೌಡಿಗಳು. ಅಗೋ ಆ ಮುರಿದ ಚೇರು ಕಂಡೆಯಾ ? ಅದು ಅವರದೇ ಕೆಲಸ. ಪುಣ್ಯಕ್ಕೆ ಪೋಲಿಸರು ಸರಿಯಾದ ಸಮಯಕ್ಕೆ ಬಂದರು, ಇಲ್ಲ ನನ್ನ ಹೋಟೆಲು ಕಸಾಯಿ ಖಾನೆಯಾಗಿರುತ್ತಿತ್ತು. ಆದರೂ ದೂರು ಕೊಡುವಂತಿಲ್ಲ. ಅವರೇ ನನ್ನ ಮುಖ್ಯ ಆದಾಯ."

ಕೌಸಲ್ಯ ನದಿಯನ್ನು ನೋಡುವ ಕವಕ ಮತ್ತೊಮ್ಮೆ ಚಂಡಿಗಢದಿಂದ ಈ ಹಳ್ಳಿಗೆ ಎಳೆದು ತಂದಿತ್ತು. ನಮ್ಮ ಮಾತು ಮೆಣಸಿನ ಕಾಯಿಯಿಂದ ಶುರುವಾಗಿತ್ತು. ಆದರೆ ಮೆಣಸಿನಕಾಯಿಯಿಂದ ಹೆಂಡಕ್ಕೆ ಬಂದು ರಕ್ತ ಚೆಲ್ಲಾಡುವ ಭೀಕರತೆಗೆ ತಲುಪಿತ್ತು. ನಿಜಕ್ಕೂ ಇದೊಂದು ಉದ್ದನೆ ಸರಪಣಿ ! ಎರಡು ಮಕ್ಕಳೊಂದಿಗೆ ಆದಷ್ಟು ಬೇಗ ಜಾಗ ಬಿಡುವ ಆತುರ ತೋರಿದೆ.

ರಸ್ತೆ ಬದಿಯ ಖಾನಾವಳಿ, ಮಣ್ಣು ಬಳಿದ ನೆಲ ಸ್ವಚ್ಛ ವಾಗಿ, ವಿಶಾಲವಾಗಿತ್ತು. ಒಂದು ಭಾಗದಲ್ಲಿ ಗೋಣಿ ಚೀಲದ ಪರದೆಯೊಂದನ್ನು ಹಾಕಿ ವಿಭಾಗಿಸಲಾಗಿತ್ತು. ಪರದೆ ಅಡಿಯಿಂದ ಮೂರು ಜೋರಿನ ಕಾಲುಗಳು ಕಾಣು ತ್ತಿದ್ದವು. ಕುಟುಂಬವೊಂದು ಜೀವಿಸುತ್ತಿದ್ದ ಜಾಗ ಅಷ್ಟೇನೂ ಅಪಾಯಕಾರಿಯಾಗಿರುವುದಿಲ್ಲ.

ನನ್ನ ಊಹೆ ತಪ್ಪಾಗಲಿಲ್ಲ. ಆಗಷ್ಟೇ ಒಬ್ಬ ಹೆಂಗಸು ಪರದೆಯೊಳಗಿಂದ ತಲೆ ತೂರಿಸಿದಳು. ಹೊರ ಬಂದು ನನ್ನ ಮುಂದೆ ನಿಂತಳು.

"ನನ್ನ ಗುರುತು ಹತ್ತಲಿಲ್ಲವೆ ?" ಎಂದು ಕೇಳಿದಳು. ಸರಳ ಉಡುಪು ತೊಟ್ಟ ತರುಣಿಯವಳು. ನಾನವಳ ಮುಖ ನೋಡಿದೆ. ಏನು ತೋಚಲಿಲ್ಲ. ಅವಳ ಗುರುತು ಹತ್ತಲಿಲ್ಲ.

"ನಿಮ್ಮನ್ನು ಕಂಡ ಕೂಡಲೆ ಗುರುತು ಹಿಡಿದೆ" ಎಂದು, ಮುಂದುವರೆಸಿ "ಹೋದ ವರ್ಷ ಬಂದಿದ್ದಿರಲ್ಲವೆ ? ಇಲ್ಲ ಅದಕ್ಕೂ ಹಿಂದಿನ ವರ್ಷ" ಎಂದು ಸರಿಪಡಿಸಿಕೊಂಡು ಹೇಳಿದಳು.

"ಹೌದು ಎರಡು ವರ್ಷದ ಹಿಂದೆ ಬಂದಿದ್ದೆ."

"ಮೈದಾನದಲ್ಲಿ ಮದುವೆ ದಿಬ್ಬಣವೊಂದು ನಿಂತಿರ ಲ್ಲಲಿವೆ"?

"ಮದುವೆ ದಿಬ್ಬಣವೆ ? ಹೌದು ನೆನಪಿದೆ"
"ನಾನೇ ಪಲ್ಲಕ್ಕಿಯೊಳಗಿದ್ದ ವಧು, ನೀವು ಒಂದು ರುಪಾಯಿ ಕೊಟ್ಟಿದ್ರಿ."

ಇಡೀ ಸನ್ನಿವೇಶ ಮನದೊಳಗೆ ಮೂಡಿತು. ಎರಡು ವರ್ಷದ ಕೆಳಗೆ ದೆಹಲಿಯ ರೇಡಿಯೋ ಸ್ಟೇಶನ್‌ನವರು, ತಮ್ಮ ಚಂಡಿಗಢ ರೇಡಿಯೋ ಸ್ಟೇಶನ್‌ನ ಉದ್ಘಾಟನಾ ಸಮಾರಂಭಕ್ಕೆ ಕವನವನ್ನು ಓದಲು ನನ್ನನ್ನು ಕೇಳಿದ್ದರು. ಕಾರ್ಯಕ್ರಮ ಮುಗಿದ ಮೇಲೆ ನನ್ನ ಗೆಳೆಯರೊಂದಿಗೆ ಹತ್ತಿರದ ಕೌಸಲ್ಯ ನದಿಯನ್ನು ನೋಡಲು ನಿರ್ಧರಿಸಿದೆ. ಇಳಿಜಾರಿನ ಹಾದಿ ಈ ಹಳ್ಳಿಯೊಳಗಿಂದ ಹಾದು ಒಂದೂವರೆ ಮೈಲಿ ದೂರದ ನದಿಯ ಕಡೆಗೆ ತಲುಪುತ್ತಿತ್ತು. ಹಿಂತಿರುಗುವಾಗ ಏರು ಹಾದಿಯಿಂದಾಗಿ ಎಲ್ಲರು ಸುಸ್ತು ಹೊಡೆದಿದ್ದರಿಂದ ಬಿಸಿ ಬಿಸಿ ಟೀ ಕುಡಿಯುವ ಮನಸ್ಸಾಗಿತ್ತು. ಈ ಹಾದಿಬದಿಯ ಹೋಟೆಲು ವಿಶಾಲವಾಗೂ, ಸ್ವಚ್ಛವಾಗೂ ಇದ್ದರಿಂದ ಇಲ್ಲೇ ಕುಡಿಯಲು ನಿರ್ಧರಿಸಿದವು. ಆ ದಿನ ಮಾಮೂಲಿಯಾಗಿ ಅಲ್ಲಿ ಕೊಡುವ ಒಲೆಯಲ್ಲಿ ಬೆಂದ ಚಪಾತಿ, ಬೇಯಿಸಿದ ಮಾಂಸವೂ ಅಲ್ಲದೆ ತಟ್ಟೆಯ ತುಂಬ ಸಿಹಿ ತಿನಿಸುಗಳಿದ್ದವು.

"ಈ ದಿನ ನನ್ನಣ್ಣನ ಮಗಳ ಮದುವೆ ದಿಬ್ಬಣ ಈ ಹಳ್ಳಿಯ ಮೂಲಕ ಹಾದು ಹೋಗಲಿದೆ." ದಿಬ್ಬಣದ ಆತಿಥ್ಯದ ಜವಾಬ್ದಾರಿ ನಾನು ಹೊತ್ತಿದ್ದೇನೆ" ಎಂದು ಹೋಟೆಲು ಮಾಲಕ ಹೇಳಿದ.

ನಾವಿಲ್ಲಿರುವಾಗಲೆ ದಿಬ್ಬಣ ಬಂತು. ವಧುವಿನ ಚಿಕ್ಕಪ್ಪನ ಕೋರಿಕೆಗಾಗಿ ಮುಂದಿನ ಹಳ್ಳಿಗೆ ಹೋಗುವ ಮುನ್ನ ದಿಬ್ಬಣ ಈ ಹಳ್ಳಿಯ ಮೈದಾನದಲ್ಲಿ ಉಳಿದಿತ್ತು.

ಯಾರೋ ನಮ್ಮಲ್ಲೊಬ್ಬರೆಂದರು, "ಮದುವೆ ಬಲು ಮೋಹಕವಾದದ್ದು, ಒಮ್ಮೆ ದಾಂಪತ್ಯ ಜೀವನ ಹೊಕ್ಕರೆ ಎಲ್ಲವೂ ನಗು, ಉಲ್ಲಾಸ ಒಮ್ಮೆ...." ಪ್ರತಿ ಟೀ ಗುಟುಕಿನೊಂದಿಗೆ ಚರ್ಚೆ ಹೆಚ್ಚು ಹೆಚ್ಚು ಉತ್ತೇಜನಗೊಂಡಿತು.

"ಸ್ವಲ್ಪ ಹೊತ್ತು ಕಾದರೆ ನಾನು ಹೋಗಿ ವಧುವನ್ನು ನೋಡಿಬರುತ್ತೇನೆ" "ವಧುವಿನ ಮುಖದಮೇಲಿನ ಭಾವ ನೋಡಲಿಷ್ಟ ನನಗೆ" ಎಂದೆ,

ಪಲ್ಲಕ್ಕಿಯ ಬಳಿ ಹೊರಡುತ್ತಿದ್ದಂತೆ ಅಸ್ಪಷ್ಟ ಮುಗುಳುನಗೆ ನನ್ನ ತುಟಿಯ ಮೇಲೆ ಮೂಡಿತು. ಪರದೆಯ ಒಂದು ಕಡೆಗೆ ತೆಗೆದುಕೊಂಡಿತ್ತು. "ನಾನೊಮ್ಮೆ ಹುಡುಗಿಯನ್ನು ನೋಡಲೆ ?" ಎಂದು ವಧುವನ್ನು ಹೊಸ ಮನೆಗೆ ಕರೆದೊಯ್ಯಲಿರುವ ವಯಸ್ಸಾದ ನಾಯಿಂದ ಹೆಂಗಸನ್ನು ಕೇಳಿದೆ.

"ಓಹೋ ಧಾರಾಳವಾಗಿ ತಾಯಿ" ಎಂದು ಉತ್ಸಾಹ ಭರಿತಳಾಗಿ ಹೇಳಿದಳು ಹೆಂಗಸು,

"ಚೂರೂ ಕುಂದಿಲ್ಲದ ಸೌಂದರ್ಯ ನಮ್ಮ ವಧುವಿನದು"

ಹೌದು, ಅವಳು ತೊಟ್ಟಿದ್ದ ಶ್ರೀಂಗಾರಪುರ ಮೂಗಿನುಂಗುರದ ಮುತ್ತಿನಂತೆಯೇ ಥಳಥಳಿಸುತ್ತಿದ್ದಳು. ಅವಳ ಕೈಯೊಳಗೆ ಒಂದು ರೂಪಾಯಿ ನೋಟಿಟ್ಟು ಹೊರಬಂದೆ:

"ವಧುವಿಗೆ ನೀನೊಬ್ಬ ಖ್ಯಾತ ಕವಿಯಿತ್ರಿ ಎಂದು ಗೊತ್ತಿದ್ದರೆ, ನೋಟಿನ ಮೇಲ್ಮೊಂದು ಸಹಿ ಹಾಕೆಂದು ಕೇಳಿರುತ್ತಿದ್ದಳು." ಎಂದು ಜೊತೆಯವರು ಛೇಡಿಸಿದರು. ಇದಾಗಿ ಎರಡು ವರ್ಷ ಕಳೆದಿದ್ದರೂ ಎಲ್ಲವೂ ವಿವರವಾಗಿ ನೆನಪಿದೆ.

"ಅದೇ ಹುಡುಗಿಯೇ ನೀನು ? ಆ ದಿನ ಪಲ್ಲಕ್ಕಿಯಲ್ಲಿ ನೋಡಿದ ಅದೆ ವಧುವೆ ?"

"ಹೌದು"

ಎರಡು ವರ್ಷಗಳ ಅಂತರದಲ್ಲಿ ಸುಂದರ ಹುಡುಗಿ ಆರೈಕೆ ಇಲ್ಲದ ಹೆಂಗಸಾಗಿ ಬದಲಾಗಿದ್ದಳು. ಜೀವನ ಸುಖಮಯವಾಗಿರಲಿಲ್ಲವೆಂದು ಕಾಣಸುತ್ತಿತ್ತು. ಹೇಗೆ ಅವಳ ಮನಸ್ಸಿನಲ್ಲಿದ್ದುದನ್ನು ಹೊರಗೆಡವಬಹುದೆಂದು ತಿಳಿಯಲಿಲ್ಲ.

"ಪೇಪರಿನಲ್ಲಿ ನಿಮ್ಮ ಫೋಟೋ ನೋಡಿದ್ದೇವೆ;ಒಂದಲ್ಲ ಎರಡು ಸಾರಿ" ಎಂದಳು. ಕೆಲವೊಮ್ಮೆ ಗಿರಾಕಿಗಳು ತಮ್ಮ ದಿನ ಪತ್ರಿಕೆಯನ್ನು ಮರೆತುಬಿಟ್ಟು ಹೋಗುತ್ತಾರೆ, ಆ ಪತ್ರಿಕೆಗಳೊಂದರಲ್ಲಿ ನಿಮ್ಮ ಫೋಟೋ ನೋಡಿದ"

"ಎಷ್ಟು ಸ್ವಾರಸ್ಯವಾಗಿದೆ. ನೀನು ನನ್ನ ಗುರುತು ಹಿಡಿದೆಯಾ ?"

"ಹೌದು, ಒಂದೇ ಕ್ಷಣದಲ್ಲಿ, ಆದ್ರೆ ಪೇಪರಿನಲ್ಲಿ ನಿಮ್ಮ ಫೋಟೋ ಯಾಕೆ ಹಾಕ್ತಾರೆ ?"

ಯಾರೂ ಯಾವುತ್ತೂ ಈ ರೀತಿ ಪ್ರಶ್ನೆ ಕೇಳಿರಲಿಲ್ಲ. ಹೇಗೆ ಉತ್ತರಿಸಬೇಕೆಂದು ತಿಳಿಯಲಿಲ್ಲ. "ನಾನು ಕಥೆ, ಕವನ ಬರೀತೀನಿ ಅದಕ್ಕೆ" ಮುಜುಗರದಿಂದ ಹೇಳಿದೆ.

"ಕಥೆಗಳ ? ನೀವು ಕಥೆ ಬರೆಯುತ್ತೀರಾ–ನಿಜವಾದ ಕಥೆಗಳಾ ?"

"ಹೌದು ಕಥೆಗಳು ನಿಜವಾದ್ದೇ ; ಆದರೆ ಹೆಸರುಗಳು ನಿಜವಾದ್ದಲ್ಲ–ಅದು ಯಾರ ಬಗ್ಗೆ ಎಂದು ಯಾರಿಗೂ ತಿಳಿಯಬಾರದು ಅದಕ್ಕೆ"

"ನೀವು ನನ್ನ ಕಥೆ ಬರೀತಿರಾ ?"

"ಖಂಡಿತವಾಗಿಯೂ, ನಿನಗೆ ಬೇಕೆಂದರೆ"

"ನನ್ನ ಹೆಸರು ಸೌಭಾಗ್ಯ. ಹೆಸರು ಮುಚ್ಚಿಡುವ ಅವಶ್ಯಕಥೆ ಇಲ್ಲ. ಹೇಗಿದೆಯೋ ಹಾಗೇ ಹಾಕಿ, ಇದ ಹೇಳಲು ನನಗೇನೂ ಹೆದರಿಕೆ ಇಲ್ಲ. ನನ್ನನ್ನು ಯಾರೂ ಕೇಳಿಸಿಕ್ಕೊಳ್ಳುವುದೂ ಇಲ್ಲ, ಗಣನೆಗೆ ತಂದುಕೊಳ್ಳು ವುದೂ ಇಲ್ಲ."

ನನ್ನ ಕೈಹಿಡಿದು ಪರದೆಯ ಹಿಂದಿದ್ದ ಮಂಚದ ಬಳಿ ಕರೆದೊಯ್ದಳು.

"ನನ್ನ ಮದುವೆಗೆ ಮೊದಲು ನನ್ನ ಮಾವನ ಮನೆ ಯಿಂದ, ಅಳತೆ ತೆಗೆದುಕ್ಕೊಳ್ಳಲೆಂದು ಇಬ್ಬರು ಹೆಂಗಸರು ಬಂದಿದ್ದರು. ಅವರಲ್ಲಿ ಒಬ್ಬಳು ಹುಡುಗಿ, ನನ್ನ ವಯಸ್ಸಿನವಳೆ. ಅವಳು ನನ್ನ ಗಂಡನ ದೂರ ಸಂಬಂದಿ

ಸಲ್ವಾರ್ ಹಾಗು ಕಮೀಜ್‌ನ ಅಳತೆ ತೆಗೆದುಕೊಂಡ ಮೇಲೆ 'ನಮ್ಮಿಬ್ಬರ ಅಳತೆ ಒಂದೇ' ಎಂದಳು. 'ನಾನು ಹೊಲೆಯುವ ಬಟ್ಟೆ ನಿನಗೆ ಸರಿಯಾಗಿ ಹೊಂದುತ್ತ ವೆಂದಳು' ಅವಳು ಹೇಳಿದ್ದು ನಿಜ. ನಾನು ಮದುವೆಗೆ ತಯ್ಯಾರಾಗಲೆಂದು ಕಳುಹಿಸಿದ್ದ ವಧುವಿನ ಬಟ್ಟೆಗಳು ನನ್ನ ಅಳತೆಗೆ ಸರಿಯಾಗಿದ್ದವು. ಆ ಹುಡುಗಿ ಎಷ್ಟೋ ತಿಂಗಳು ನನ್ನೊಂದಿಗಿದ್ದು ನನ್ನ ಎಲ್ಲಾ ಬಟ್ಟೆಗಳನ್ನು ಹೊಲೆದುಕೊಟ್ಟಳು. ನನ್ನನ್ನು ತುಂಬಾ ಇಷ್ಟಪಡು ತ್ತಿದ್ದಳು. ಮನೆಯಿಂದ ಹೋಗುವಾಗ, ನಾನು ಕೆಲವಾರು ತಿಂಗಳು ಬರದಿದ್ದರೂ ಪರವಾಗಿಲ್ಲ. ಬೇರೆ ಯಾರ ಕೈಲೂ ನಿನ್ನ ಬಟ್ಟೆಗಳನ್ನ ಹೊಲೆಸಿಕ್ಕೊಳ್ಳಬೇಡ, ಹಿಂತಿರುಗಿ ಬಂದ ಮೇಲೆ ನಾನೇ ಹೊಲೆಯಲಿಷ್ಟ ಪಡುತ್ತೇನೆಂದಳು.

ಅವಳು ನನ್ನನ್ನು ಇಷ್ಟಪಟ್ಟಷ್ಟೇ ನಾನೂ ಅವಳನ್ನು ಇಷ್ಟಪಡುತ್ತಿದ್ದೆ. ಅವಳ ಒಂದೇ ವರ್ತನೆ ನನಗೆ ಇಷ್ಟ ವಾಗುತ್ತಿರಲಿಲ್ಲ, ಬಟ್ಟೆಯನ್ನು ನನಗೆ ಕೊಡುವ ಮೊದಲು ತಪ್ಪದೇ ಅವಳು ಹಾಕಿಕೊಂಡು ನೋಡಿ ಕೊಡುತ್ತಿದ್ದಳು. 'ನಮ್ಮ ಅಳತೆ ಒಂದೇ ನೋಡು ಹೇಗೆ ನಿನ್ನ ಬಟ್ಟೆಗಳು ನನಗೆ ಹೊಂದುತ್ತವೆ ?' ಎನ್ನುತ್ತಿದ್ದಳು.

"ಬಟ್ಟೆಗಳು ಹೊಸತಾದರೂ, ಅವು ಬೇರೆಯವರು ಉಪಯೋಗಿಸಿದ್ದವೆಂಬ ಭಾವನೆ ಏನು ಮಾಡಿದರೂ ನನ್ನಿಂದ ಹೋಗುತ್ತಿರಲಿಲ್ಲ."

ಓದು ಬರಹ ಬಾರದ, ಅಂದಗೆಟ್ಟ ಮಹಿಳೆ ಹಗ್ಗದ ಮಂಚದ ಮೇಲೆ ಹಾಸಿದ್ದ ನವೆದು, ಸುಕ್ಕಾದ ಬಟ್ಟೆಯ ಮೇಲೆ ಕುಳಿತಿದ್ದಳು. ಆದರೆ ಅವಳ ಮನದೊಳಗಿನ ಸೂಕ್ಷ್ಮ ವಿಚಾರಕ್ಕೆ ಚಕಿತಳಾದೆ.

"ನನ್ನ ಮನಸ್ಸಿನಲ್ಲಿದ್ದನ್ನು ಆ ಹುಡುಗಿಗೆ ನಾನು ಹೇಳಲಿಲ್ಲ, ಹೇಳಿದ್ದರೆ ಅವಳಿಗೆ ನೋವಾಗುತ್ತಿತ್ತೇನೊ" ಎಂದಳು.

"ಸರಿ ?"

"ವಿಶಯ ಒಂದು ವರ್ಷದ ನಂತರ ತಿಳಿಯಿತು. ನನ್ನ ಗಂಡನಿಗೂ ಆ ಹುಡುಗಿಗೂ ಸಂಬಂಧವಿತ್ತು. ಅವಳು ನನ್ನ ಗಂಡನ ದೂರದ ಸಂಬಂಧಿ. ಎರಡು, ಮೂರು ಬಾರಿ ಓಡಿಸಲಾಗಿತ್ತು. ಅವರಿಬ್ಬರ ನಡುವಿನ ವ್ಯವಹಾರದಿಂದ ಅವಳ ಅಣ್ಣ ಬಹಳ ಖಿನ್ನನಾಗಿದ್ದ, ಅವಳ ತಲೆ ತೆಗೆಯುವುದಾಗಿ ಹೆದರಿಸಿಯೂ ಇದ್ದು, ನನ್ನ ಮದುವೆಯ ದಿನ ನನ್ನ ಗಂಡ ಕುಳಿತು ಬರುತ್ತಿದ್ದ ಕುದುರೆಯ ಲಗಾಮು ಹಿಡಿದುಕೊಂಡಿದ್ದ ಅವಳು ಉನ್ಮಾದಗೊಂಡು ಮೂರ್ಛೆ ಹೋದಳೆಂದು ಯಾರೋ ಬಂದು ನನಗೆ ಹೇಳಿ ದ್ದರು"

ಆ ಹೆಂಗಸಿನ ಕಣ್ಣು ನೀರು ತುಂಬಿಕೊಂಡಿದ್ದು ಕಂಡೆ. ತಟಕ್ಕನೆ ನನ್ನ ಕೈಹಿಡಿದು ತನ್ನ ನಡುಗುವ ಕೈಗಳಲ್ಲಿ ಹಿಡಿದುಕೊಂಡಳು. "ದಯವಿಟ್ಟು ಸರಿಯಾಗಿ ಅರ್ಥ ಮಾಡಿಕೊಳ್ಳಿ" ಎಂದಳು "ಉಪಯೋಗಿಸಿಬಿಟ್ಟ ಬಟ್ಟೆಗಳೆಂದರೆ ತಿರಸ್ಕಾರ ನನಗೆ. ನನ್ನ ಹೊಂಬಣ್ಣದಲ್ಲೇ ಸಿದ್ಧ ಕಮೀಜ್, ನಕ್ಷತ್ರಗಳಿದ್ದ ಚುನುರಿ, ಜರತಾರಿ ಕಸೂತಿಯಿದ್ದ ಕಮೀಜ್ ಎಲ್ಲವೂ ಒಂದು ರೀತಿ ಅವಳು ಉಟ್ಟು ಬಿಟ್ಟಿದ್ದು. ಬಟ್ಟೆಗಳೊಂದೇ ಅಲ್ಲ, ನನ್ನ ಗಂಡನೂ ಕೂಡ ನನ್ನ ಮಾತಿನ ಅರ್ಥ ತಿಳಿಯಿತೆಂದುಕೊಳ್ಳುವೆ."

ಆ ಭಾವನೆಗಳನ್ನು ಯಾರಾದರೂ ಪದಗಳ ಮೂಲಕ ಹೇಳಲು ಸಾಧ್ಯವೆ ? ಈ ಕೆಲಸಕ್ಕೆ ನಾನು ಅಸಮರ್ಥಳೆನಿಸಿತು.

"ಆ ಬಟ್ಟೆಗಳನ್ನು ಹಿಂದೆಯೇ ಬಿಟ್ಟುಬಂದೆ" ಹಾಗೇ "ನನ್ನ ಗಂಡನನ್ನು ಕೂಡ" ಎಂದು ಮುಂದುವರೆಸಿದಳು. ಈಗ ನನ್ನ ಚಿಕ್ಕಪ್ಪನೊಂದಿಗಿರುವೆ. ಕಸ ಗುಡಿಸಿ,ಟೇಬಲ್‌ಗಳನ್ನು ಒರೆಸುತ್ತೇನೆ, ಹೊಲಿಗೆ ಮೆಶಿನ್ನು ತಂದಿದ್ದೇನೆ, ಹೊಲೆಯುವ ಕೆಲಸವನ್ನು ಮಾಡುತ್ತೇನೆ. ಮನೆಯಲ್ಲಿ ನೇಯ್ದ ಖಾದಿ ಬಟ್ಟೆ ಉಡುತ್ತೇನೆ, ಅದರಲ್ಲೇ ತೃಪ್ತಿಯಾಗಿದ್ದೇನೆ. ಅವು ಅತ್ಯುತ್ತಮ ರೇಶಿಮೆ ಬಟ್ಟೆಗಳೇ ಆಗಿರಲಿ ಉಪಯೋಗಿಸಿಬಿಟ್ಟ ಬಟ್ಟೆಗಿಂತ ಈ ಖಾದಿ ಬಟ್ಟೆಯನ್ನೇ ನಾನು ಇಷ್ಟಪಡುತ್ತೇನೆ.

ನನ್ನ ಚಿಕ್ಕಪ್ಪಗೆ ಜಗಳ ಬಗೆ ಹರಿಸುವ ಕಾತುರ. ಅವನು ನನ್ನನ್ನು ಅರ್ಥಮಾಡಿಕೊಳ್ಳುವುದಿಲ್ಲ. ನಾನಂತೂ ಹೇಗಿದ್ದೆನೋ ಹಾಗೆ ಸಂತೋಷವಾಗಿದ್ದೇನೆ. ಇದಕ್ಕಿಂತ ಹೆಚ್ಚಿನದೇನೂ ಬೇಡ. ಇದೇ ನನ್ನ ಕಥೆ. ನನಗಾಗಿ ದಯವಿಟ್ಟು ಬರೆಯಿರಿ. ನನ್ನ ಭಾವನೆಗಳು ಜನಕ್ಕೆ ತಿಳಿಯಬೇಕು" ಸೌಭಾಗ್ಯ ! ಗಟ್ಟಿ ದೇಹದ, ಗಟ್ಟಿ ಹೃದಯದ ಹೆಣ್ಣು-ಎಷ್ಟೆಲ್ಲಾ ಸಂಕಟ ಅನುಭವಿಸಿದ್ದಾಳೆ. ಬಳಿ ಎಳೆದು ಅವಳನ್ನು ಅಪ್ಪಿಕೊಂಡೆ.

ಹೊರಗೆ ಸಿಮ್ಲಾದಿಂದ ಬರುತ್ತಿದ್ದ ಕಾರುಗಳು ಆ ಸಣ್ಣ ಹೋಟೆಲಿನ ಮುಂದೆ ಹಾದುಹೋಗುತ್ತಿದ್ದವು. ಆಗಾಗ ಹೋಟೆಲಿನ ಮುಂದೆ ಕಾರು ನಿಲ್ಲುತ್ತಿದ್ದವು. ರೇಶಿಮೆ ತೊಟ್ಟ ಕಾರಿನವರು ಟೀಗೆಂದೊ, ಸಿಗರೇಟಿಗೆಂದೋ, ಚಪಾತಿಗೆಂದೋ ಹೋಟೆಲಿಗೆ ಬರುತ್ತಿದ್ದರು. ರೇಶಿಮೆಯನ್ನು ತೊರೆದು ಖಾದಿ ತೊಟ್ಟ ಸೌಭಾಗ್ಯ ಮೌನವಾಗಿ ಅವರಿಗೆ ಗಮನ ಕೊಡುತ್ತಿದ್ದಳು.

"ನೀವು ಕೊಟ್ಟ ನೋಟನ್ನು ಹಾಗೇ ಇಟ್ಟುಕೊಂಡಿದ್ದೇನೆ" ಎಂದಳು.

"ನಿಜವಾ ? ಬಹಳ ಹಿಂದೆ ನಾನು ಕೊಟ್ಟಿದ್ದು"

"ಜೋಪಾನವಾಗಿರಲೆಂದು ನಾಯಿಂದ ಮುದುಕಿಯ ಬಳಿ ಇರಿಸಿದ್ದೆ. ನಿಮ್ಮ ಫೋಟೋ ನೋಡಿದ ಮೇಲೆ ಅವಳಿಂದ ವಾಪಸ್ ತೆಗೆದುಕೊಂಡೆ"

ಮಂಚದ ಅಡಿಯಿದ್ದ ಟ್ರಂಕೊಂದನ್ನು ಎಳೆದು,ಮರದ ಪೆಟ್ಟಿಗೆಯೊಳಗಿಂದ ಮಡಿಚಿಟ್ಟ ರೂಪಾಯಿ ನೋಟನ್ನು ತೋರಿಸಿದಳು.

ಇದರ ಮೇಲೆ ನನಗೆಂದು ನಿನ್ನ ಹೆಸರನ್ನು ಬರೆದು ಕೊಡು" ಎಂದಳು.

"ಸಂತೋಷವಾಗಿ ಬರೆದುಕೊಡುತ್ತೇನೆ ಸೌಭಾಗ್ಯ. ಆದರೆ ನನ್ನ ನೋಟಿನ ಮೇಲೆ ನಿನ್ನ ಹೆಸರು ಬರೆಯುವುದು ಸೂಕ್ತ. ಕಥೆ ಬರೆಯುವವರು ದೊಡ್ಡವರಲ್ಲ, ಕಥೆಯಾಗಿ ಬದುಕುವವರು. ಈ ನೋವುಗಳೇ ಒಬ್ಬರನ್ನು ದೊಡ್ಡವರನ್ನಾಗಿಸುವುದು"

ಪರ್ಸಿನಿಂದ ರೂಪಾಯಿ ನೋಟು ಪೆನ್ನು ಹೊರ ತೆಗೆದೆ.

"ನನಗೆ ಚೆನ್ನಾಗಿ ಬರೆಯಲು ಬರುವುದಿಲ್ಲ" ನಾಚಿಕೆಯಿಂದ ಹೇಳಿದಳು. "ಆದರೂ ಪ್ರಯತ್ನಿಸುವೆ" ಸೌಭಾಗ್ಯ ಈ ದಿನ ನಿನ್ನ ಕಥೆ ಬರೆಯಲು ಕೂತೆ. ದೇವಿಯ ಹಣೆಯ ಮೇಲ್ಲಿನ ಸೌಭಾಗ್ಯದ ಚಿಹ್ನೆಯೇ ಕಥೆಯ ಹೆಸರು.

ಕಥೆಯಿಂದ ನಿನಗೇನೂ ಒಳ್ಳೆಯದಾಗುವುದಿಲ್ಲವೆಂದು ಗೊತ್ತು. "ನಿನ್ನ ಹಣೆಯ ಕಂಕುಮದ ಬಣ್ಣವನ್ನು ಹೋಲುವ ಇತರರ ರಕ್ತವನ್ನು ಚೆಲ್ಲಾಡುವಂತಹವರು ನಿನ್ನನ್ನು ಸನ್ಮಾನಿಸುತ್ತಾರೆ, ಯಾರು ಉಟ್ಟು ಬಿಟ್ಟಿದ್ದನ್ನು ತೊಡುವರೋ ಅವರು ನಾಚಿಕೆಯಲ್ಲಿ ನೇಣು ಹಾಕಿಕೊಳ್ಳುತ್ತಾರೆ"

ಅನುವಾದಿತ :

ಪ್ರಾಂತೀಯ ಮಹಿಳಾ ಸಮಾವೇಶ : ಒಂದು ಪೂರ್ವಭಾವೀ ಚರ್ಚೆ

ದೇಶವೊಂದರ ಘನತೆಯನ್ನು, ಜನ-ಮನಗಳ ಸೂಕ್ಷ್ಮ ಸಂವೇದನೆಯನ್ನು ನೆಲಸಮಾಧಿ ಮಾಡುವ ಕೆಲಸ ಅಯೋಧ್ಯೆಯೆಂಬ ಸಣ್ಣ ನಗರದಲ್ಲಿ ನಡೆಯುತ್ತಿರುವಾಗಲೇ ಇತ್ತ 'ಬೆಂಗಳೂರೆಂಬ' ಮಹಾನಗರದಲ್ಲಿ ಮಹಿಳೆಯರ ಒಂದು ಸಣ್ಣ ಗುಂಪು ಮಹಿಳೆಯರ ಘನತೆಗಾಗಿ ಹೋರಾಡುವ, ಮಹಿಳಾ ಸಂವೇದನೆಗಳ ಹುಡುಕಾಟದಲ್ಲಿ ತೊಡಗುವ ಒಟ್ಟಾದ ಪ್ರಯತ್ನದ ಸಾಧ್ಯತೆಗಳಿಗಾಗಿ ಕಳಕಳಿಯ ಚರ್ಚೆ ನಡೆಸಿತ್ತು. ಇದು ಈಗಾಗಲೇ ತಿಳಿದಿರುವಂತೆ, ಐದನೇ ರಾಷ್ಟ್ರೀಯ ಸಮಾವೇಶಕ್ಕೆ ಪೂರ್ವಬಾವಿಯಾಗಿ ಪ್ರಾಂತೀಯ ಸಮಾವೇಶವೊಂದರ ಸಾಧ್ಯತೆ-ಬಾದ್ಯತೆಗಳನ್ನು ಚರ್ಚಿಸಲು 1992ರ ಡಿಸೆಂಬರ್ ಆರರಂದು ಕರ್ನಾಟಕದ ಸ್ವಾಯತ್ತ ಮಹಿಳಾ ಗುಂಪುಗಳು ಸೇರಿದ್ದ ಸಭೆಯನ್ನು ಕುರಿತು ಹೇಳುತ್ತಿರುವುದು ಎಂದು ವಿಶೇಷವಾಗಿ ಹೇಳಬೇಕಾಗಿಲ್ಲ.

ಸುಮಾರು 50 ಮಹಿಳೆಯರ ಈ ಸಭೆ ಆರಂಭವಾದದ್ದೇ ಕೋಮು ಸೌಹಾರ್ದತೆಯ ಹಾಡಿನಿಂದ

> "ಹೇಳೇ ಗೆಳತಿ ನಾವು ನೀವೂ ಏನಂತೀವಿ
> ಮಸೀದಿ ಒಡೆದು ಮಂದಿರ ಕಟ್ಟೋದು
> ಯಾಕಂತೀವಿ..."

ಎಂದು ಹಾಡುತ್ತಿದ್ದವರಿಗೆ ಅದೇ ಕ್ಷಣದಲ್ಲಿ ನಾಲ್ಕು ಶತಮಾನಗಳಿಗೂ ಪುರಾತನವಾದ ಚಾರಿತ್ರಿಕ ಮಸೀದಿ ಸ್ವಲ್ಪ-ಸ್ವಲ್ಪವೇ ನೆಲಸಮವಾಗುತ್ತಾ, ಚರಿತ್ರೆಯ ಪುಟಗಳೊಳಕ್ಕೆ ಲೀನರಾಗುತ್ತಿದ್ದುದರ ಯಾವ ಕಲ್ಪನೆಯೂ ಇರಲಿಲ್ಲ. ಬರೀ ಮ್ಲಾನತೆ ಮಾತ್ರ ಇತ್ತು ಪ್ರತಿಬಿಂಬದಂತೆ.

ಚಿಂತಾಮಣಿಯ ಶ್ರೀಮತಿ ಉತ್ತನೂರು ರಾಜಮ್ಮ ನೇತೃತ್ವದ ಮಹಿಳಾ ಒಕ್ಕೂಟ, ತುಮಕೂರಿನ ಗ್ರಾಮೀಣ ಶೈಕ್ಷಣಿಕ ಅಭಿವೃದ್ಧಿ ಸಂಸ್ಥೆ, ಬೆಂಗಳೂರಿನ ವಿಮೆನ್ಸ್ ವಾಯ್ಸ್, ಸಕ್ತಿ, ಮಾನಿನಿ, ವಿಮೋಚನಾ, ಮಾನಸ, ಮಹಿಳಾ ಸಮಖ್ಯಾ, ವಿಸ್ತಾರ್, YWCA ಐ.ಎಸ್.ಐ. ಈ ಮೊದಲಾದ ಸಂಸ್ಥೆಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರಲ್ಲದೆ, ಯಾವ ಸಂಸ್ಥೆಯ ವ್ಯಾಪ್ತಿಗೂ ಒಳಪಡದ ವೈಯುಕ್ತಿಕ ಹಂತದಲ್ಲಿ ಚಳವಳಿಯ ಭಾಗವಾಗಿ ತಮ್ಮನ್ನು ಗುರುತಿಸಿಕೊಳ್ಳುವ ಅನೇಕರೂ ಇಲ್ಲಿದ್ದರು. ಈ ಒಂದು ದಿನದ ಸಭೆ ನಡೆದದ್ದು ISI ನಲ್ಲಿ.


ರಾಷ್ಟ್ರ ಮಟ್ಟದಲ್ಲಿ ಮಹಿಳಾ ಸಮಾವೇಶಗಳು ನಡೆಯುತ್ತಾ ಬಂದಿವೆ. ನಡೆಯುತ್ತಿರುತ್ತವೆ. ಮತ್ತು ಮಹಿಳಾ ಚಳವಳಿಯಲ್ಲಿ ತಮ್ಮದೇ ಆದ ಮಹತ್ವ ಕೂಡ ಅವಕ್ಕಿವೆ. ಆದರೆ ದೇಶದ ನಾಲ್ಕೂ ದಿಕ್ಕುಗಳ ಮೂಲೆಗಳಿಂದ ಬರುವ ಮಹಿಳೆಯರಿಗೆ ನಿಜಾರ್ಥದಲ್ಲಿ ಈ ಸಮಾವೇಶಗಳು ಎಷ್ಟು ಆಪ್ತವಾಗಬಲ್ಲುವು? ಎಷ್ಟರ ಮಟ್ಟಿಗೆ ಅದನ್ನು ತಮ್ಮದೆಂಬಂತೆ ಅವರು ಭಾವಿಸಿಕೊಳ್ಳುತ್ತಾರೆ ? ಎಂಬಂತಹ ಪ್ರಶ್ನೆಗಳ ಹಿನ್ನೆಲೆಯಲ್ಲಿ 1990ರಲ್ಲಿ ಕ್ಯಾಲಿಕಟ್‌ನಲ್ಲಿ ನಡೆದ ಸಮಾವೇಶವನ್ನು ಪರೀಕ್ಷಿಸಿದಾಗ ಇಂತಹ ಸಾಧ್ಯತೆಗಳಿಗಿರುವ ಸ್ಪಷ್ಟ ಮಿತಿಗಳು ಕಂಡುಬಂದುವು. ಇಂತಹ ಮಿತಿಗಳನ್ನು ಮೀರುವುದಕ್ಕಾಗಿಯೇ ಒಂದು ಪ್ರಾಂತೀಯ ಸಮಾವೇಶದ ಅಗತ್ಯವನ್ನು ಮನಗಾಣಲಾಗಿರುವುದು, ರಾಜ್ಯ ಮಟ್ಟದಲ್ಲಿ. ಅಂದು ಸೇರಿದ್ದ ಎಲ್ಲರಿಗೂ ಇದರ ಸ್ಪಷ್ಟತೆ ಇತ್ತು ಅಥವಾ ಪಡೆಯಲಾಯಿತು. ಇಲ್ಲಿ ಪ್ರಾಂತೀಯ ಸಮಾವೇಶ ಬೇಕೋ ಬೇಡವೇ ಎಂಬ ಚರ್ಚೆ ಈ ಕಾರಣಕ್ಕಾಗಿಯೇ ಗೌಣವಾಗಿತ್ತು. ಇಲ್ಲಿ ರೂಪಿಸಬೇಕಾದ್ದು ಸಮಾವೇಶದ ಸ್ವರೂಪವನ್ನು ಮತ್ತು ಚರ್ಚೆಗೊಳಪಡಿಸುವ ಸಮಸ್ಯೆ ವಿಷಯಗಳನ್ನು.

'ಸಮಾವೇಶವೆಂದ ಮೇಲೆ ಅಲ್ಲಿ ನಡೆಯುವುದು ವಿವಿಧ ಅಂಶಗಳ ಚರ್ಚೆ' ಎನ್ನುವುದು ತಮ್ಮೊಳಗೆ ವಿಧಿತಗೊಂಡ ಸತ್ಯ ಎಂಬಂತೆ ಮೊದಲಿಗೆ ಚರ್ಚೆಗೊಳಪಡಿಸುವ ಸಮಸ್ಯೆಗಳನ್ನು ಗುರುತಿಸುವ ಕೆಲಸ ಪ್ರಾರಂಭವಾಯಿತು. ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೋದಂತೆ ಸಮಸ್ಯೆಗಳ ಪಟ್ಟಿಯೂ ಬೆಳೆ

ಯುತ್ತಾ ನಡೆದಿತ್ತು. ಕೊನೆಯ ವೇಳೆಗೆ ಈ ಪಟ್ಟಿಯಲ್ಲಿ ಏನೆಲ್ಲವನ್ನೂ ಮಹಿಳೆಯರ ಸಮಸ್ಯೆಗಳು ಎಂದು ಗುರುತಿಸಲು ಸಾಧ್ಯವೋ ಹೆಚ್ಚು ಕಮ್ಮಿ ಅವೆಲ್ಲಾ ಇದ್ದವು.

* ಮಹಿಳೆಯ ಮೇಲಿನ ಹಿಂಸಾಚಾರ–ಕೌಟುಂಬಿಕ, ಸಾಂಸ್ಥಿಕ ಜಾತಿ-ಮತ ಸಂದರ್ಭದಲ್ಲಿ
* ಕುಡಿತದ ಸಮಸ್ಯೆ, ಮಹಿಳೆಯರು ಎದುರಿಸುವಂತೆ
* ಮೂಲಭೂತವಾದ, ಮಹಿಳೆಯರು ಅನುಭವಿಸಿದಂತೆ
* ಮಹಿಳೆಯರಿಗಾಗಿ ಇರುವ ಸರ್ಕಾರೀ ಕಾರ್ಯಕ್ರಮಗಳ ವಿಶ್ಲೇಷಣೆ.
* ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆ, ಕೂಲಿ ಕಾರ್ಮಿಕರ ಸಮಸ್ಯೆಗಳು
* ಹೊಸ ಆರ್ಥಿಕ ನೀತಿ-ಮಹಿಳೆಯರ ಮೇಲೆ ಅದರ ಪರಿಣಾಮ
* ಮಹಿಳೆ ಮತ್ತು ಆರೋಗ್ಯ
* ಮೀಸಲಾತಿಯ ವಿಶ್ಲೇಷಣೆ ಮಹಿಳೆಯರ ಸಂಬಂಧದಲ್ಲಿ
* ಪರಿಸರದ ಅವನತಿ ಮತ್ತು ಮಹಿಳೆ
* ಮಹಿಳೆಯರ ಹಕ್ಕುಗಳು
* ಮಹಿಳೆ ಮತ್ತು ಶಿಕ್ಷಣ
* ಸಮೂಹ ಮಾಧ್ಯಮಗಳು-ಮಹಿಳೆಯರ ಮೇಲೆ ಅವುಗಳ ಹಾವಳಿ
* ಮಹಿಳೆಯರ ವಸತಿ ಸಮಸ್ಯೆ
* ದಲಿತ ಮಹಿಳೆಯರ ಸಮಸ್ಯೆಗಳು
* ರಾಜಕೀಯ ಮತ್ತು ಮಹಿಳೆ
* ಜನಸಂಖ್ಯಾ ಸ್ಫೋಟ, ಇಲ್ಲಿ ಸಿಕ್ಕಿಕೊಂಡ ಮಹಿಳೆ
* ಅಭಿವೃದ್ಧಿ ಮತ್ತು ಮಹಿಳೆ
* ಮಹಿಳಾ ಸಂಸ್ಥೆಗಳಲ್ಲಿ ಪುರುಷ ಸ್ವರೂಪೀ ಅಂಶಗಳ ಚರ್ಚೆ

ಆದರೆ ಸಮಾವೇಶ ಇವೆಲ್ಲದರ ಚರ್ಚೆಗೆ ಅವಕಾಶ ಹೊಂದಿಸಿಕೊಡಬಲ್ಲ ಸಾಧ್ಯತೆ ಪಡೆದಿರುತ್ತದೆ ಎಂಬ ಭ್ರಮೆ ಮಾತ್ರ ಯಾರೊಬ್ಬರಿಗೂ ಇರಲಿಲ್ಲ. ಹೀಗೆ ಗುರುತಿಸಲ್ಪಟ್ಟ ಸಮಸ್ಯೆಗಳನ್ನು ಕೆಲವು ವಿಸ್ತಾರ ಗುಂಪುಗಳಲ್ಲಿ ವಿಂಗಡಿಸುವುದು ಅವಶ್ಯವಾಗಿತ್ತು. ಅದಕ್ಕಿಂತ ಮುಖ್ಯವಾಗಿ ಸಮಾವೇಶದ ಸ್ವರೂಪ ಎಂತದ್ದಿರುತ್ತದೆ ? ಅಲ್ಲಿ ಸಮಸ್ಯೆಗಳ ಚರ್ಚೆ ನಡೆಯುತ್ತದೆಯೇ ಅಥವಾ ಬೇರೆ ಏಂತದ್ದಾದರೂ (ಮೇಳದಂತಹ) ಒಂದು ಸಂಗತಿಯಾಗಿರುತ್ತದೆಯೇ ? ಇದನ್ನು ಸ್ಪಷ್ಟೀಕರಿಸಿಕೊಳ್ಳುವ ಅವಶ್ಯಕತೆ ಇತ್ತು. ಸಮಾವೇಶದ ಸ್ವರೂಪಕ್ಕನುಗುಣವಾಗಿ ಈ ಸಮಸ್ಯೆಗಳನ್ನು ನಿರ್ವಹಿಸುವುದು ಮುಖ್ಯವಾಗಿತ್ತು. ಹೀಗಾಗಿ ಇಡೀ ಸಭೆನಾಲ್ಕು ಸಣ್ಣ ಗುಂಪುಗಳಲ್ಲಿ ಚದುರಿ ಎರಡು ಅಂಶಗಳನ್ನುತನ್ನ ಚರ್ಚೆಗೆ ಎತ್ತಿಕೊಂಡಿತು :



1. ಸಮಾವೇಶದ ಸ್ವರೂಪ ಎಂಥದ್ದಾಗಿರುತ್ತದೆ?
2. ಎಂತಹ ಸಮಸ್ಯೆಗಳ ಚರ್ಚೆಯಾಗಬೇಕು ಸಮಾವೇಶದಲ್ಲಿ ?.

ಹೀಗೆ ಸ್ವಲ್ಪ ಆಳವಾಗಿಯೇ ನಡೆಸಿದ ಸುಮಾರು ಒಂದೂವರೆ ಗಂಟೆಗಳ ಕಾಲದ ಗುಂಪು ಚರ್ಚೆಯಲ್ಲಿ ಅನೇಕ ಸ್ಪಷ್ಟ ಅಂಶಗಳು ಹೊರಬಂದವು.

ಸಮಾವೇಶದ ಸ್ವರೂಪ :

ಪ್ರಾಂತೀಯ ಸಮಾವೇಶ, ಬರೀ ರಾಷ್ಟ್ರೀಯ ಸಮಾವೇಶಕ್ಕೆ ಪೂರ್ವಭಾವಿಯಾದುದು,ರಾಷ್ಟ್ರೀಯ ಸಮಾವೇಶದಲ್ಲಿನ ಭಾಗವಹಿಕೆಗಾಗಿ ಮಾಡಿಕೊಳ್ಳುವ ಸಿದ್ಧತೆ ಎಂಬ ಗ್ರಹಿಕೆಯಿಂದ ಮುಕ್ತವಾಗಬೇಕು.ಇದು ತನ್ನದೇ ಮಹತ್ವವನ್ನು ಹೊಂದಿ, ಕರ್ನಾಟಕದ ಮಹಿಳೆಯರು ಒಟ್ಟಿಗೆ ಬರುವಂತಹ ಒಂದು ಸಂಗತಿಯಾಗಬೇಕು.ತಮ್ಮ-ತಮ್ಮದೇ ರೀತಿಯಲ್ಲಿ, ಅಲ್ಲಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಮಹಿಳಾ ಗುಂಪುಗಳೂ ಒಟ್ಟಿಗೆ ಒಂದೇ ವೇದಿಕೆಯಲ್ಲಿ ಬರುವಂತೆ ಆಗಬೇಕು. ಅಲ್ಲದೇ ಕರ್ನಾಟಕದ ಕೊಂಪೆ-ಕೊಂಪೆಗಳಲ್ಲಿ

ತಮ್ಮದೇ ಸಾಮರ್ಥ್ಯದಲ್ಲಿ ಸಣ್ಣ-ಸಣ್ಣ ಗುಂಪುಗಳನ್ನು ರಚಿಸಿಕೊಂಡಿರುವವರು, ಮೇಲಿನ ಗುಂಪುಗಳಂತಲ್ಲದೆ ಅಗೋಚರವಾಗಿಯೇ ಇರುವಂತಹವರು ಮತ್ತು ಕಳಕಳಿಯಿರುವ ಎಲ್ಲ ವ್ಯಕ್ತಿಗಳೂ (ಮಹಿಳೆಯರು) ಭಾಗವಹಿಸಲು ಸಾಧ್ಯವಾಗಬೇಕು. ಹಳ್ಳಿ-ಪಟ್ಟಣ, ಜಾತಿ-ಮತ-ವರ್ಗ-ವ್ಯಕ್ತಿಗಳೆಂಬ ಗುಂಪುಗಳಿಲ್ಲದೆ ಎಲ್ಲರೂ ತಾನು 'ಮಹಿಳೆ'ಯೆಂಬುದನ್ನು ಭಾವಿಸಲು ಸಾಧ್ಯವಾಗುವಂತಹ ರೀತಿಯಲ್ಲಿ ಸಮಾವೇಶ ರೂಪುಗೊಳ್ಳಬೇಕು. ಯಾವುದೇ ಗುಂಪು ಅಥವಾ ವ್ಯಕ್ತಿ ಸಮಾವೇಶದಲ್ಲಿ ಮೇಲುಗೈ! ಪ್ರಭುತ್ವ ಸಾಧಿಸಲು ಸಾಧ್ಯವಾಗದ ರೀತಿಯಲ್ಲಿ ಇಲ್ಲಿನ ಚರ್ಚೆಗಳು, ಚಟುವಟಿಕೆಗಳು ಇರಬೇಕು. ಇದಕ್ಕೆ ಪೂರಕವಾಗುವಂತಹ ಸರಳ ಭಾಷೆ, ಸಣ್ಣ ಗುಂಪುಗಳಲ್ಲಿ ಚರ್ಚೆ ಇರಬೇಕು. ಅಲ್ಲದೆ ವ್ಯಕ್ತಿಗಳು-ಗುಂಪುಗಳು ತಮಗೆ ಅನುಕೂಲವಾಗುವ,ಆರಾಮವೆನಿಸುವ ರೀತಿಯಲ್ಲಿ-ನಾಟಕ, ಹಾಡು, ಆಟಗಳು, ಕಥೆ, ಕವನ, ಗೊಂಬೆಯಾಟ, ಪೋಸ್ಟರುಗಳು, ಸಿನೆಮಾ, ಚರ್ಚೆ ಯಾವುದೇ ರೀತಿಯಲ್ಲಿ ತಮ್ಮನ್ನು ಅಭಿವ್ಯಕ್ತಿಸಲು ಸಾಧ್ಯವಾಗುವಂತಿರಬೇಕು. ಚರ್ಚೆಗಳ ನಿಯಂತ್ರಕರು/ ಸಂಯೋಜಕರು, ಇವರ ಪಾತ್ರ ತುಂಬಾ ಕಡಿಮೆ, ಕಣ್ಣಿಗೆ ಕಾಣದಷ್ಟು ಕಡಿಮೆ ಇರಬೇಕು. ಭಾಷಣಗಳಿರಕೂಡದು.

'ಮಹಿಳೆಯರ ಸಭೆ-ಸಮಾರಂಭಗಳು ಮನೆಯಲ್ಲಿ ಕೆಲಸ ಇಲ್ಲದೆ ಇರುವಂತಹ ಹೆಂಗಸರು 'ಟೈಂಪಾಸ್' ಮಾಡಲು ಸೇರುವಂತಹವು' ಎಂದು ಇರುವ ಲೇವಡಿಯ ಮಾತನ್ನು ಸಾರಾಸಗಟಾಗಿ ಸುಳ್ಳು ಮಾಡುವ ರೀತಿಯಲ್ಲಿ ಸಮಾವೇಶ ಇರಬೇಕು.

ಸಮಾವೇಶದ ಕೊನೆಯಲ್ಲಿ ರ್‍ಯಾಲಿ ಇದ್ದು, ಕುಡಿತದ ಸಮಸ್ಯೆಯನ್ನೇ ರ್‍ಯಾಲಿಯ ವಸ್ತುವಾಗಿ ಬಳಸಿಕೊಂಡು ಭಿನ್ನ ರೀತಿಯಲ್ಲಿ ಇದನ್ನು ರೂಪಿಸಬೇಕು. ಇದೊಂದು Action oriented ರ್‍ಯಾಲಿಯಾಗಿದ್ದು ಸಾರಾಯಿ ಅಂಗಡಿಗಳಿಗೆ ಹೋಗಿ ಅದನ್ನು ಮುಚ್ಚುವಂತೆ ಮಾಡಬೇಕು.

ಇಡೀ ಸಮಾವೇಶ ಮಹಿಳೆಯರನ್ನು ಮುಕ್ತವಾಗಿ ಭಾಗವಹಿಸುವಂತೆ ಮಾಡಿ, ಮಹಿಳೆಯರು ತಮ್ಮ ಸಮಷ್ಟಿ ಶಕ್ತಿಯನ್ನು ಭಾವಿಸಿಕೊಳ್ಳಲು ಸಾಧ್ಯವಾಗಿಸಿದರೆ ಅಷ್ಟರ ಮಟ್ಟಿಗೆ ಅದು ಯಶಸ್ವಿಯಾಯಿತೆನ್ನಬಹುದು ಎಂಬುದು ಕೆಲವರ ಅಭಿಪ್ರಾಯವಾಗಿತ್ತು.

ಸಮಸ್ಯೆಗಳು/ವಿಷಯಗಳು

ಎಲ್ಲಾ ಗುಂಪುಗಳು ಕುಡಿತದ ಸಮಸ್ಯೆಯನ್ನು ಗಾಢವಾಗಿ ಮನಗಂಡಿದ್ದವು. ಅದರ ಜೊತೆಗೆ ಹಿಂದೆ ಬಂದ ಸಮಸ್ಯೆಗಳನ್ನೆಲ್ಲಾ ಕೆಲವು ನಿರ್ದಿಷ್ಟ ಗುಂಪುಗಳಡಿ ವಿಂಗಡಿಸಲಾಯಿತು. ಅವೆಂದರೆ,

* ಮಹಿಳೆಯರ ಮೇಲಿನ ಹಿಂಸಾಚಾರ-ವಯಕ್ತಿಕ. ಕೌಟುಂಬಿಕ, ಸಾಂಸ್ಥಿಕ
* ಸರ್ಕಾರಿ ಕಾರ್ಯಕ್ರಮಗಳ ಟೀಕಾತ್ಮಕ ವಿಶ್ಲೇಷಣೆ
* ಹೊಸ ಆರ್ಥಿಕ ನೀತಿ-IMF, ವಿಶ್ವ ಬ್ಯಾಂಕ್, ಹಣದುಬ್ಬರ, ಬೆಲೆಯೇರಿಕೆ-
* ಮಹಿಳೆ ಮತ್ತು ಅಧಿಕಾರ-ರಾಜಕೀಯದಲ್ಲಿ, ಮಹಿಳಾ ಸಂಸ್ಥೆಗಳಲ್ಲಿ. ಹಾಗೂ ಮೀಸಲಾತಿ
* ಮಹಿಳೆಯ ಆರೋಗ್ಯದ ಹಕ್ಕುಗಳು-ಕುಟುಂಬ ಯೋಜನೆ, ಏಡ್ಸ್ ಇತ್ಯಾದಿ
* ಮಾಧ್ಯಮದಲ್ಲಿ ಅಶ್ಲೀಲತೆ-ಟಿ.ವಿ. ಸಿನೆಮಾ, ಪತ್ರಿಕೆಗಳು ರೇಡಿಯೋ
* ಸಾಕ್ಷರತೆ ಮತ್ತು ಶಿಕ್ಷಣ
* ಅಭಿವೃದ್ಧಿ ಮಾದರಿಗಳು, ಪರಿಸರದ ಅವನತಿ
* ಅಸಂಘಟಿತ ವರ್ಗದಲ್ಲಿ ಮಹಿಳೆ, ದಲಿತ ಮಹಿಳೆ
* ಮೂಲಭೂತವಾದ

ಇದನ್ನು ಇನ್ನೂ ಸಂಕ್ಷಿಪ್ತಗೊಳಿಸುವ ಸಾಧ್ಯತೆ ಇತ್ತು. ಉದಾಹರಣೆಗೆ 'ಮಹಿಳೆ ಮತ್ತು ಅಭಿವೃದ್ಧಿ' ಎಂಬ ವರ್ಗೀಕರಣದಡಿ ಸರ್ಕಾರೀ ಕಾರ್ಯಕ್ರಮಗಳು, ಹೊಸ ಆರ್ಥಿಕ ನೀತಿ, ಪರಿಸರ ಅವನತಿ ಇತ್ಯಾದಿಗಳೆಲ್ಲಾ ಸೇರಿ ಹೋಗುವ ಸಾಧ್ಯತೆ ಇದೆ. ಅಂದಿನ ಸಭೆಯಲ್ಲಿ ಸಮಯ ಸಾಲದೇಹೋದ್ದರಿಂದ ಮುಂದಿನ ಸಭೆಗಳಲ್ಲಿ ಇವನ್ನು ಎತ್ತಿಕೊಳ್ಳಬಹುದು.

ಸಮಾವೇಶದ ಅವಧಿ, ಸ್ಥಳ, ದಿನಾಂಕ ಮತ್ತು ಪೂರ್ವಭಾವೀ ಸಿದ್ಧತೆಗಳು :

ಸಮಾವೇಶವನ್ನು 1993ರ ಮೇ ತಿಂಗಳಿನಲ್ಲಿ ಮೂರು ದಿನಗಳ ಕಾಲ ನಡೆಸಬೇಕೆಂಬ ಸಲಹೆಯೊಂದು ಬಂದಿದೆ. ಶಾಲಾ-ಕಾಲೇಜುಗಳಿಗೆ ಆ ಸಮಯದಲ್ಲಿ ರಜೆ ಯಿರುವುದರಿಂದ ಮತ್ತು ಅವುಗಳನ್ನು ಸ್ಥಳಕ್ಕಾಗಿ ಪ್ರಯತ್ನಿಸುವ ಸಾಧ್ಯತೆ ಇರುವುದರಿಂದ ಈ ಸಲಹೆ ಮನ್ನಣೆ ಪಡೆಯಿತು.

ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸುವ ಮತ್ತು ಬೇರೆ ಸ್ಥಳಗಳಲ್ಲಿ ನಡೆಸುವ ಎರಡೂ ಸಲಹೆಗಳೂ ಬಂದವು. ಬೆಂಗಳೂರು, ಸಚಿವಾಲಯದಿಂದ ಹಿಡಿದು ಎಲ್ಲಾ ಪ್ರಮುಖ ಸರ್ಕಾರೀ ಚಟುವಟಿಕೆಗಳ ಕೇಂದ್ರ ವಾಗಿರುವುದರಿಂದ, ಪರಿಣಾಮದ ದೃಷ್ಟಿಯಿಂದ ಮುಖ್ಯ ವಾಗುತ್ತದೆ. ಇದನ್ನು ಹೊರತು ಪಡಿಸಿ ಬಿಟ್ಟರೆ, ಮುಖ್ಯ ವಾಗಿ ಆಪ್ತತೆಯ ದೃಷ್ಟಿಯಿಂದ ಬೇರೆ ಕಡೆಯಲ್ಲಿ ನಡೆಯು ವುದೇ ತುಂಬಾ ಮುಖ್ಯ. ಅಂತಹ ಸಂದರ್ಭದಲ್ಲಿ, ರಾಜ್ಯದ ಮಧ್ಯಭಾಗದಲ್ಲಿರುವ ಶಿವಮೊಗ್ಗ ಸೂಕ್ತವಾಗುತ್ತದೆ. ಆದರೆ ದಿನ-ದಿನದ ಜವಾಬ್ದಾರಿಯನ್ನು ನೋಡಿಕೊಳ್ಳು ವಂತಹ ಗುಂಪುಗಳು ಇಂತಹ ಸ್ಥಳಗಳಿಂದ ಮುಂದೆ ಬಂದಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಕರ್ನಾಟಕದ ಎಲ್ಲ ಮೂಲೆ–ಕೊಂಪೆಗಳಲ್ಲಿನ ಮಹಿಳೆಯ ರಿಗೆ ಸಮಾವೇಶದ ಸುದ್ದಿ ಮುಟ್ಟಬೇಕು. ಇದಕ್ಕಾಗಿ ಬಂದ ಒಂದು ಸಲಹೆಯೆಂದರೆ, ಕೆಲವು ಹಾಡು, ಬೀದಿ ನಾಟಕ ಗಳನ್ನ ರೂಪಿಸಿಕೊಂಡ ತಂಡಗಳು ಕರ್ನಾಟಕದಾದ್ಯಂತ ಸಂಚರಿಸಿ ಇದನ್ನು ಹರಡಬೇಕು.

ಸಮಾವೇಶಕ್ಕೆ ಬೇರೆ ಎಲ್ಲದ್ದಕ್ಕಿಂತ ತುಂಬಾ ಮುಖ್ಯ ವಾಗುವುದೆಂದರೆ ಹಣ. ಹಣ ಸಂಗ್ರಹಣೆಗಾಗಿ ಬಂದ ಕೆಲವು ಸಲಹೆಗಳೆಂದರೆ, ಕಾರ್ಡ್‌ಗಳನ್ನೂ ಮುದ್ರಿಸಿ ಮಾರಾಟ ಮಾಡುವುದು, ಅಲ್ಲದೆ ಕರ್ನಾಟಕದಾದ್ಯಂತ ಸಂಚರಿಸುವ ತಂಡಗಳು, ಸಮಾವೇಶದ ಬಗ್ಗೆ ತಿಳಿಸುತ್ತಲೇ ಹಣವನ್ನು ಸಂಗ್ರಹಿಸಬೇಕಾಗುತ್ತದೆ.

ಸಮಾವೇಶ ಎಲ್ಲೇ ನಡೆಯಲಿ ಲಭ್ಯವಿರುವ ಸರ್ಕಾರೀ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು, ಬಸ್-ರೈಲುಗಳಿಂದ ಹಿಡಿದು ಸ್ಥಳದವರೆಗೂ. ಇದು ನಮ್ಮ ಕಾನೂನುಬದ್ಧ ಹಕ್ಕಾಗಿರುವುದರಿಂದ ಇದನ್ನು ಒತ್ತಾಯಿಸಿ ಪಡೆಯಬೇಕು ಎಂಬಂಶ ಎಲ್ಲರೂ ಮನಗಾಣುವಂತಿತ್ತು.

ಸಮಾವೇಶದ ಪೂರ್ವಭಾವೀ ಸಿದ್ಧತೆಗಳಿಗೆ ಕೆಲಸ ಮಾಡಲು ಎಲ್ಲಾ ಮಹಿಳಾ ಗುಂಪುಗಳ ಒಂದು ಒಕ್ಕೂಟ ವನ್ನು ರಚಿಸಿಕೊಳ್ಳಬೇಕು ಎಂದು ತೀರ್ಮಾನಿಸಲಾಯಿತು.

ಡಿಸೆಂಬರ್ ಆರರ ಈ ಸಭೆ ಪ್ರಾಂತೀಯ ಸಮಾವೇಶಕ್ಕೆ ಸ್ಪಷ್ಟ ದಾರಿಯನ್ನು ತೋರಿಸುವಂತಿದ್ದರೂ, ಸಮಾವೇಶ ವನ್ನು ಮೂರ್ತ ರೀತಿಯಲ್ಲಿ ಸಂಯೋಜಿಸಲು ಇನ್ನೂ ಎರಡು ಸಭೆಗಳನ್ನಾದರೂ ಪೂರ್ವಭಾವಿಯಾಗಿ ನಡೆಸ ಬೇಕಾಗುತ್ತದೆ ಎಂಬುದು ಅಭಿಪ್ರಾಯವಾಗಿತ್ತು. ಈ ಸಭೆ ಬೆಂಗಳೂರಿನಲ್ಲಿ ನಡೆದ ಕಾರಣ ಮುಂದಿನವು ಬೇರೆ ಎಲ್ಲಾದರೂ ನಡೆಯುವುದು ಮುಖ್ಯ. ಚಿಂತಾಮಣಿ ಮತ್ತು ತುಮಕೂರಿನ ಮಹಿಳೆಯರು ಮುಂದಿನ ಸಭೆ ಗಳನ್ನು ತಮ್ಮಲ್ಲಿ ನಡೆಸುವ ಜವಾಬ್ದಾರೀ ಹೊತ್ತು ಕೊಳ್ಳಲು ಸಿದ್ಧರಿದ್ದರು. ಹೀಗಾಗಿ ಮುಂದಿನ ಸಭೆ ತುಮಕೂರಿನಲ್ಲಿ 1993ರ ಜನವರಿ 9 ರಂದು ನಡೆಯು ವಂತೆ ತೀರ್ಮಾನಿಸಲಾಯಿತು.

ಡಿಸೆಂಬರ್ ಆರರ ಸಭೆಯ ಆಗು-ಹೋಗುಗಳನ್ನು ಇಷ್ಟೊಂದು ವಿವರವಾಗಿ ಓದುಗರಿಗೆ ಕೊಡಲು ಕಾರಣ ವಿಷ್ಟೆ. ಪ್ರಾಂತೀಯ ಸಮಾವೇಶಕ್ಕೆ ಇದೀಗ ಸಿದ್ಧತೆಗಳು ಪ್ರಾರಂಭವಾಗಿದೆ. ನಾವು ನಡೆಯುವ ದಾರಿ ಮಾತ್ರ ದೊಡ್ಡದಿದೆ ಮುಂದೆ. ನೀವು ಮುಂದಿನ ಹಂತಗಳಲ್ಲಿ ನಿಮ್ಮದೇ ಆದ ರೀತಿಯಲ್ಲಿ ಈ ಸಮಾವೇಶಕ್ಕಾಗಿ ಕೆಲಸ ಮಾಡುವ ಸಾಧ್ಯತೆ ಖಂಡಿತಾ ಇದೆ. ಮುಂಬರುವ ಸಭೆ ಗಳಲ್ಲಿ ನೀವು ಭಾಗವಹಿಸಬಹುದು. ಅಥವಾ ಇನ್ಯಾವುದೇ ರೀತಿಯಲ್ಲಿ ಒಕ್ಕೂಟದ ಸದಸ್ಯರಾಗಬಹುದು. ಸಮಾ ವೇಶಕ್ಕೆ ನೀವು-ನಿಮ್ಮ ಸುತ್ತಲಿನವರು ದುಡಿಯಬಹುದು. ಒಟ್ಟಾರೆಯಲ್ಲಿ ನಾವೆಲ್ಲರೂ ಕರ್ನಾಟಕದ ಮಹಿಳಾಶಕ್ತಿಯ ಭಾಗವಾಗುವುದರ ಸಾಧ್ಯತೆಯನ್ನ ಕಂಡುಕೊಳ್ಳುವುದು ಮುಖ್ಯವಾಗುತ್ತದೆ ಇಲ್ಲಿ.

ವಿ. ಗಾಯತ್ರಿ

ಕೇವಲ ಪುರುಷರಿಗೆ ಮಾತ್ರ. . .

> **ಜಂಟಿ ಅರಣ್ಯ ನಿರ್ವಹಣೆಯ ಯೋಜನೆಗಳು ಹೆಚ್ಚುತ್ತಿರುವ ಹಾಗೆ, ಅರಣ್ಯ ಇಲಾಖೆಗಳು ಹೆಚ್ಚು Gender Sensitive ಆಗುತ್ತಿರುವುದು ಎದ್ದು ಕಾಣುತ್ತದೆ. ದುರದೃಷ್ಟಕರವೆಂದರೆ ದೇಶದ ಅರಣ್ಯ ಇಲಾಖೆಯ ಕ್ಷೇತ್ರ ಸಿಬ್ಬಂದಿಗಳಲ್ಲಿ ಮಹಿಳೆಯರ ತೀವ್ರ ಕೊರತೆ ಇದೆ**

ದೇಶದ ಯಾವುದೇ ಅರಣ್ಯ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿ ಇಲ್ಲವೇ ಇಲ್ಲವೆಂದು ಬಹಳಷ್ಟು ಜನಕ್ಕೆ ತಿಳಿದೇ ಇಲ್ಲವೆನ್ನುವುದು ಆಶ್ಚರ್ಯ ಹುಟ್ಟಿಸುತ್ತದೆ. ಕೆಲವೇ ಮಹಿಳೆಯರು, ಅಖಿಲ ಭಾರತ ಮಟ್ಟದ ಪ್ರವೇಶ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಭಾರತೀಯ ಅರಣ್ಯ ಸೇವೆಯಲ್ಲಿದ್ದಾರೆ. ಆದರೆ ಅವರೆಲ್ಲ ಉನ್ನತ ಅಧಿಕಾರಿ ವರ್ಗಕ್ಕೆ ಸೇರಿದವರು ಹಾಗು ಇವರು ಸಹಜವಾಗಿಯೇ ತಮ್ಮ ದಿನ ನಿತ್ಯದ ಕಾರ್ಯ ನಿರ್ವಹಣೆಯಲ್ಲಿ ಹಳ್ಳಿಗರೊಂದಿಗೆ ಯಾವ ರೀತಿಯಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವುದಿಲ್ಲ. ಏನೆಂದರೂ ಅವರ ಸಂಖ್ಯೆ ತೀರಾ ಕಡಿಮೆ.

ಅರಣ್ಯ ಇಲಾಖೆಯಲ್ಲಿ ಮಹಿಳಾ ಅರಣ್ಯ ರಕ್ಷಕ ಅಧಿಕಾರಿಗಳಾಗಲಿ, ವಿಭಾಗೀಯ ಅಧಿಕಾರಿಗಳಾಗಲಿ ಅಥವಾ ಅರಣ್ಯ ಕಾವಲುಗಾರರಾಗಲಿ ಇಲ್ಲವೇ ಇಲ್ಲವೆಂದು ಹೇಳಬಹುದು. 1980ರಲ್ಲಿ ದಾನಿ ಸಂಸ್ಥೆಗಳ ಒತ್ತಾಯದ ಮೇರೆಗೆ ಕೆಲವು ಅರಣ್ಯ ಇಲಾಖೆಗಳು 'ಸಾಮಾಜಿಕ ಅರಣ್ಯ' ಯೋಜನೆಯಲ್ಲಿ ಮಹಿಳೆಯರನ್ನು ಕ್ಷೇತ್ರ ಸಿಬ್ಬಂದಿಗಳಾಗಿ ನೇಮಕ ಮಾಡಿಕೊಂಡವು. ಈ ಯೋಜನೆಯು ಬಹಳಷ್ಟು ರಾಜ್ಯಗಳಲ್ಲಿ, ನಿಯಮದ ಪ್ರಕಾರ ಪಂಚಾಯಿತಿ ಅಥವಾ ಖಾಸಗಿ ಭೂಮಿಗೊಳಪಟ್ಟಿರುತ್ತದೆ. ಒಂದೆರಡು ರಾಜ್ಯಗಳಲ್ಲಷ್ಟೇ ಸರ್ಕಾರಿ ಅರಣ್ಯ ಭೂಮಿಗೆ ಸೇರಿದ್ದಾಗಿದೆ. ಈ ಭೂಮಿಯು ರಾಷ್ಟ್ರದ ಒಟ್ಟು ಜಾಗದ ಕಾಲುಭಾಗದಷ್ಟು ಮಾತ್ರ. ಹೆಚ್ಚು ಗ್ರಾಮೀಣ, ಅದರಲ್ಲೂ ಆದಿವಾಸಿ ಪಂಗಡಗಳು ಅವಲಂಭಿಸಿರುವ ಭೂಮಿ ಇದು.

ಅರಣ್ಯ ಇಲಾಖೆಗಳು ಹೆಚ್ಚು ಹೆಚ್ಚು ಜಂಟಿ ಅರಣ್ಯ ನಿರ್ವಹಣೆ (ಸರ್ಕಾರಿ ಮಾಲೀಕತ್ವದ ಅರಣ್ಯ ಭೂಮಿಯನ್ನು ಜಂಟಿಯಾಗಿ ಗ್ರಾಮೀಣ ಸಂಘಟಿತ ಗುಂಪುಗಳೊಟ್ಟಿಗೆ)ಯನ್ನು ಉತ್ತೇಜಿಸುತ್ತಿರುವಾಗ, ಅರಣ್ಯ ಇಲಾಖೆಗಳಲ್ಲಿ ಮಹಿಳಾ ಉದ್ಯೋಗಾವಕಾಶದ ಅಗತ್ಯ ಜರೂರಿಯಾಗಿದೆ. ಕಾರಣ ಭಾರತದ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಮರದ ಹೊರತಾಗಿ ಮೇವು, ಸೌದೆ, ಗಿಡ ಮೂಲಿಕೆ, ಅರಣ್ಯ ಉತ್ಪನ್ನಗಳ ಸಂಗ್ರಹ ಮಹಿಳೆಯರಿಗೆ ಸಂಬಂಧಿಸಿದ್ದಾಗಿದೆ. ಜಂಟಿ ಅರಣ್ಯ ನಿರ್ವಹಣೆಯು ಪ್ರಧಾನ ಅರಣ್ಯ ಬಳಕೆದಾರರನ್ನು ಒಳಗೊಳ್ಳುವುದಾದಲ್ಲಿ ಅದು ಮಹಿಳೆಯರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಮುಂದೆ ಬರಬೇಕು.

ಹರ್‍ಯಾಣ ಅರಣ್ಯ ಇಲಾಖೆಯು 1989ರಲ್ಲಿ, ಹೊರಗಡೆಯ ಸಂಪನ್ಮೂಲ ವ್ಯಕ್ತಿಗಳ ತಂಡದ ಸಹಕಾರದೊಂದಿಗೆ ಜಂಟಿ ಅರಣ್ಯ ನಿರ್ವಹಣೆ ಯೋಜನೆಯನ್ನು ಕೈಗೊಂಡಿತು. ಆ ತಂಡದಲ್ಲಿ ನಾನು ಸದಸ್ಯೆಯಾಗಿದ್ದೆ. ನಾವು ಇಲಾಖೆಯೊಳಗೆ ಮಹಿಳಾ ಕ್ಷೇತ್ರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಹುಡುಕಾಟ ಶುರುಮಾಡಿದೆವು. ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಹದಿನೈದು ಮಹಿಳಾ ಗ್ರಾಮೀಣ ಅರಣ್ಯ ಕಾರ್ಮಿಕರು ಸಿಕ್ಕರು (ಯೋಜನೆಯ ಪ್ರಕಾರ ಸುಮಾರು 300 ಜನ ಮಹಿಳೆಯರನ್ನು ನೇಮಕ ಮಾಡಿಕೊಳ್ಳಬೇಕಿತ್ತು. ಆದರೆ ಮಹಿಳೆಯರ ಅಸಾಮರ್ಥ್ಯವನ್ನು ಯಾರೋ ಎತ್ತಿ ಹಿಡಿದಿದ್ದರಿಂದ ಹೆಚ್ಚಿನ ಮಹಿಳೆಯರ ನೇಮಕಾತಿ ನಿಂತುಹೋಯಿತು). ಈ ಮಹಿಳಾ ಗ್ರಾಮೀಣ

ಅರಣ್ಯ ಕಾರ್ಮಿಕರ ಶ್ರೇಣಿಯು ಪ್ರಾಂತೀಯ ಅರಣ್ಯ ಕಾವಲುಗಾರರ ಶ್ರೇಣಿಗೆ ಸಮನಾಗಿತ್ತು.

ನಾವು ಆ ಮಹಿಳೆಯರಲ್ಲಿ ಇಬ್ಬರನ್ನು ಜಂಟಿ ಅರಣ್ಯ ನಿರ್ವಹಣೆಯ ಸಹಾಯಕ ತಂಡದಲ್ಲಿ ಸೇರಿಕೊಳ್ಳಲು ಮನವೊಲಿಸಿದೆವು. ಆದರೆ ಇದು ಬರೀ ಪ್ರಾರಂಭಿಕರಿಗೆ ಮಾತ್ರವಾಗಿತ್ತು. ಯೋಜನೆಯನ್ನು ಸಾಂಸ್ಥೀಕರಣಗೊಳಿಸುವ ಹಂತದಲ್ಲಿ ಹಳ್ಳಿಯ ಹೆಂಗಸರನ್ನು ದಿನನಿತ್ಯದ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡುವ ಮಹಿಳೆಯರ ಅವಶ್ಯಕತೆ ಇಲಾಖೆಗಿತ್ತು. ಆದರೆ ಪ್ರಾಂತೀಯ ಭಾಗಗಳಲ್ಲಿ ಮಹಿಳಾ ಅರಣ್ಯ ರಕ್ಷಕ ಅಧಿಕಾರಿಗಳಾಗಲಿ, ಮಹಿಳಾ ವಿಭಾಗೀಯ ಅಧಿಕಾರಿಗಳಾಗಲಿ, ಮಹಿಳಾ ಅರಣ್ಯ ಕಾವಲುಗಾರರಾಗಲಿ ಇಲಾಖೆಯಲ್ಲಿ ಇರಲಿಲ್ಲ.

ಇದು ನಮ್ಮನ್ನು ಮಹಿಳಾ ಕ್ಷೇತ್ರ ಸಿಬ್ಬಂದಿಗಳೇಕಿಲ್ಲ ಎಂದು ತಲೆ ಕೆಡಿಸಿಕೊಳ್ಳುವಂತೆ ಮಾಡಿತು. ಮಹಿಳೆಯರು ಈ ಕೆಲಸಗಳಿಗೆ ಹಾಕಿಕೊಳ್ಳಬಾರದೆಂಬ ನಿಯಮವೇನಾದರೂ ಇತ್ತೆ ? ಇಲಾಖೆಯ ಹಿರಿಯ ಅಧಿಕಾರಿಗಳ ಬಳಿಯೂ ಸ್ಪಷ್ಟ ಉತ್ತರವಿರಲಿಲ್ಲ. ಅವರು, ಸಂವಿಧಾನದ ಸಮಾನ ಹಕ್ಕಿನ ನೀತಿಯನ್ನೇ ಉಲ್ಲಂಘಿಸುತ್ತದೆಯಾದ್ದರಿಂದ ಇದು ಸಾಧ್ಯವಿಲ್ಲವೆಂದು ಭಾವಿಸಿದರು. ಇದಕ್ಕೆ ಕಾರಣವಾದರೂ ಏನು ?

ಹರ್ಯಾಣ ಅರಣ್ಯ ಇಲಾಖೆಯ ಮುಖ್ಯ ಕಛೇರಿಯ ಕಡತಗಳನ್ನು ಹುಡುಕುತ್ತಾ ಹೊರಟಾಗ ಈ ಅಂಶಗಳು ನಮ್ಮ ಗಮನಕ್ಕೆ ಬಂದವು– ಮಹಿಳೆಯರನ್ನು ನಿಬಂಧಿಸುವ ಯಾವುದೇ ನಿಯಮವಿಲ್ಲದೆ ಹೋದರೂ ಯಾರೋ ಹಲವಾರು ವರ್ಷಗಳ ಹಿಂದೆ "ಬರೀ ಗಂಡಸರಿಗೆ ಮಾತ್ರ" ಎಂಬ ಷರತ್ತನ್ನು ಹರ್ಯಾಣ ಅರಣ್ಯ ಇಲಾಖೆಯು ಲೋಕಸೇವಾ ಆಯೋಗ ಹಾಗೂ ಉಪ ಸೇವಾ ಮಂಡಳಿಗೆ ಕಳುಹಿಸಿದ ಕೋರಿಕೆ ಪತ್ರದಲ್ಲಿ ಸೇರಿಸಿದ್ದರು. ಹೊಸ ಕ್ಷೇತ್ರ ಸಿಬ್ಬಂದ್ದಿಗಳನ್ನು ನೇಮಕಾತಿ ಮಾಡಿಕೊಳ್ಳುವ ಜವಾಬ್ದಾರಿ ಮೇಲಿನ ಎರಡು ಸಂಸ್ಥೆಗಳಿಗಿತ್ತು. ಅಂತಿಮವಾಗಿ ಹರ್ಯಾಣ ಅರಣ್ಯ ಇಲಾಖೆಯಲ್ಲಿ ಈ ಷರತ್ತನ್ನು ತೆಗೆಯಲಾಯಿತು. ಇದನ್ನು ಇತರ ರಾಜ್ಯಗಳ ಅರಣ್ಯ ಇಲಾಖೆಗೂ ಅನ್ವಯಗೊಳಿಸುವ ಅವಶ್ಯಕತೆ ಇದೆ.

ಹರ್ಯಾಣ ಅರಣ್ಯ ಇಲಾಖೆಯ ಹೊಸ ಕ್ಷೇತ್ರ ಸಿಬ್ಬಂದಿಯ ನೇಮಕಾತಿಯ ಧೋರಣೆಗಳನ್ನು ಎಚ್ಚರಿಕೆಯಿಂದ ಗಮನಿಸುವಾಗ ತುಂಬಾ ದೊಡ್ಡ ಅಡ್ಡಿಯೊಂದಿರುವುದು ಸ್ಪಷ್ಟ ಕಂಡಿತು. ಅದೆಂದರೆ ದೈಹಿಕ ಸಾಮರ್ಥ್ಯ ಎಲ್ಲಾ ಅರಣ್ಯ ಇಲಾಖೆಗಳು ಪುರುಷಕ್ಷೇತ್ರ ಸಿಬ್ಬಂದಿಗಳ ನೇಮಕಾತಿಗೆ ಅನ್ವಯಿಸುವ ರೀತಿಯಲ್ಲಿ ದೈಹಿಕ ಸಾಮರ್ಥ್ಯಗಳನ್ನು ಗೊತ್ತುಪಡಿಸಿದ್ದವು. ಇದರಲ್ಲಿ ಕನಿಷ್ಟ ಎತ್ತರ ಮತ್ತು ಸಾಧಾರಣ ಹಾಗೂ ಹಿಗ್ಗಿದ ಎದೆಯಳತೆಗಳು ಒಳಗೊಂಡಿವೆ. ಮಹಿಳೆಯರಿಗೆ ಅನ್ವಯಿಸುವಂತ ದೈಹಿಕ ಪ್ರಮಾಣಗಳನ್ನು ಗೊತ್ತುಪಡಿಸಿರಲಿಲ್ಲ. ಹರ್ಯಾಣದ ಹಿರಿಯ ಅಧಿಕಾರಿಗಳು, ಪೋಲಿಸ್ ಇಲಾಖೆಯಲ್ಲಿ ಮಹಿಳೆಯರಿಗೆ ಗೊತ್ತುಪಡಿಸಲಾಗಿರುವ ದೈಹಿಕ ಪ್ರಮಾಣಗಳನ್ನೇ ಅರಣ್ಯ ಇಲಾಖೆಗೂ ಅನ್ವಯಿಸಿಕೊಳ್ಳಬಹುದೆಂದು ಅಭಿಪ್ರಾಯಪಟ್ಟರು. ಆದರೆ ಪೋಲಿಸ್ ಮಹಾ ನಿರ್ದೇಶಕರ ಕಛೇರಿಯು ಯಾವುದೇ ಪ್ರತಿಕ್ರಿಯೆ ತೋರದ ಕಾರಣ ಇದು ನೆನೆಗುದಿಗೆ ಬಿದ್ದಿದೆ.

ಎಲ್ಲಾ ಅಡೆತಡೆಗಳನ್ನು ದಾಟಿ, ಅರಣ್ಯ ಇಲಾಖೆ ಸೇರಿದ ಕೆಲವೇ ಮಹಿಳೆಯರು ಸಂಪೂರ್ಣ ಪುರುಷ ಸಂಸ್ಕೃತಿಯನ್ನು ಹೊಂದಿರುವ ಇಲಾಖೆಯಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಪುರುಷ ಅಧಿಕಾರಿಗಳು ಕಷ್ಟಕರವಾದ ಅರಣ್ಯದ ಕೆಲಸಕ್ಕೆ ಮಹಿಳೆಯರು ಹೊಂದುವುದಿಲ್ಲವೆಂಬ ರೂಢಿಗತ ನಂಬಿಕೆಯನ್ನು ಎತ್ತಿಹಿಡಿಯುವುದಲ್ಲದೆ, ಮಹಿಳೆಯರು ತಮ್ಮ ಸ್ಥಾನದಲ್ಲಿ ಕೆಲಸ ಮಾಡುವುದು ಅವರಿಗೆ ಸ್ವಲ್ಪವೂ ಸಹ್ಯ ಅಲ್ಲ.

ಹರ್ಯಾಣದ ಗ್ರಾಮೀಣ ಅರಣ್ಯ ಮಹಿಳಾ ಕಾರ್ಮಿಕರಿಗಾಗಿ ನಡೆಸಿದ ಕಮ್ಮಟದಲ್ಲಿ ಕೆಲವು ಅಂಶಗಳು ಬೆಳಕಿಗೆ ಬಂದವು. ವಸತಿ, ಶಿಶುಪಾಲನೆ, ಸಾರಿಗೆಗೆ ಸಂಬಂಧಿಸಿದ ಸಮಸ್ಯೆಗಳಲ್ಲದೆ, ಬಹಳಷ್ಟು ಮಹಿಳೆಯರನ್ನು ಅವರ ಅಭಿಪ್ರಾಯಗಳನ್ನು ಕೇಳದೆಯೇ ಕ್ಷೇತ್ರ ಕೆಲಸದಿಂದ ಕಛೇರಿ ಕೆಲಸಗಳಿಗೆ ವರ್ಗಾಯಿಸಲಾಗಿತ್ತು. ಆದರೆ ಮಹಿಳೆಯರೇ ಕಛೇರಿ ಕೆಲಸಗಳಿಗೆ ತಮ್ಮನ್ನು ವರ್ಗಾಯಿಸುವಂತೆ ಕೇಳಿಕೊಂಡಿದ್ದಾರೆಂಬ ಚಿತ್ರಣವನ್ನು ಕೊಡಲಾಗಿತ್ತು.

17ನೇ ಪುಟಕ್ಕೆ

ಹೆಣ್ಣು - ಎಂದೆಂದಿಗೂ ?

ಮಾತೃಭೂಮಿ, ಭಾರತೀಯ ಇತ್ಯಾದಿ ಪದಗಳು ಜಗತ್ತಿನ ಸೃಷ್ಟಿಗೆ ಮೂಲ ಹೆಣ್ಣೇ ಕಾರಣ. ಪುರುಷರಿಗೆ ಒತ್ತು ನೀಡುವ ಪದಗಳು. ಆರ್ಯ ಸಂಸ್ಕೃತಿಗೆ ಮೊದಲು ಹೆಣ್ಣು ಮನೆಯ ಹೊರಗೂ, ಗಂಡು ಮನೆಯೊಳಗೆ ದುಡಿಯುತ್ತಿರುವುದು ಕಂಡು ಬಂದಿದೆ! ಮಾತೃಪ್ರಧಾನ ಕುಟುಂಬದ ಲಕ್ಷಣವೇ ಹೆಣ್ಣಿನ ಯಜಮಾನಿಕೆಯನ್ನು ತೋರಿಸುತ್ತದೆ ! ಈಗಲೂ ಇದು ದಲಿತ ಮಹಿಳೆಯರಲ್ಲಿ ಕಂಡುಬಂದರೂ, ನಾಗರೀಕತೆಯು ಬೆಳೆದಂತೆ, ಹೆಣ್ಣು ಪಕ್ಷಪಾತಿಯಂತೆ ನೋಡುವ ನೋಟ 21ನೇ ಶತಮಾನದಲ್ಲಿ ನಡೆಯುತ್ತಿದೆ! ಭೂಮಿಯ ಮೂಲಧಾತುವಿನಂತೆ ಹೆಣ್ಣು ಹೋಲಿಕೆಯಂತೆ ಕಾಣಬರುತ್ತಿದೆ ! ಭೂಮಿ ಫಲವತ್ತತೆ ಹೆಣ್ಣೇ ಸಂತಾನ ಪ್ರಾಪ್ತಿ, ಸಸ್ಯಗಳ ಪರಾಗಸ್ಪರ್ಶ ಕ್ರಿಯೆಯಿಂದ ಪ್ರಾರಂಭದಿಂದ ಫಲ ನೀಡುವ ರೀತಿಯಂತೆ ಇದೆ ! ಹೆಣ್ಣು ಶಕ್ತಿಹೀನಳು ಎಂಬ ಕೃತಕ ಆರೋಪ ಹೊರಿಸಿ, ಮನೆಯೊಳಗೆ ಬಂಧನದ ಜೊತೆಗೆ ಹೇರುವ ಯಂತ್ರ ಮಾಡುವುದರ 'ಧರ್ಮ'ದ ಮೂಲಕ ಒತ್ತಡ ಹೇರುವ ನೀಚತನ ಈಗಲೂ ಮುಂದುವರೆದಿದೆ. ಹಿಂದೂ ಇಸ್ಲಾಂ, ಕ್ರೈಸ್ತ ಮತ-ಧರ್ಮಗಳು ಹೆಣ್ಣಿನ ಸ್ವಾತಂತ್ರ್ಯ ಹರಣವನ್ನು ಧರ್ಮಭೇದವಿಲ್ಲದೆ ಮಾಡುತ್ತ ಬಂದಿದೆ. ಹಿಂದೂ ಧರ್ಮದ ಬಾಲ್ಯವಿವಾಹ, ವಿಧವೆ, ದೇವದಾಸಿ ಪದ್ಧತಿ, ಇಸ್ಲಾಂ ಧರ್ಮದಲ್ಲಿ ಪರದಾ ಪದ್ಧತಿ, ವರದಕ್ಷಿಣೆ. ಕ್ರೈಸ್ತಧರ್ಮದಲ್ಲೂ ಮೇಲುನೋಟಕ್ಕೆ ಸ್ವತಂತ್ರಳಂತೆ ಕಂಡರೂ ಅಲ್ಲೂ ಅನ್ಯಧರ್ಮೀಯ ಮಹಿಳೆಯರಂತೆ ಕಟ್ಟುಪಾಡುಗಳನ್ನು ಚಾಚು ತಪ್ಪದೆ ಮಾಡುತ್ತಾ ಬಂದಿರುವ ದುರಂತದ ಅಧ್ಯಾಯವಾಗಿದೆ.

ಹಿಂದೂ ಧರ್ಮದ ಸನಾತನಗಳಲ್ಲಿ ಹೆಣ್ಣಿನ ಉಡುಪು, ಆಚಾರ-ವಿಚಾರ, ಮನರಂಜನೆಯಲ್ಲೂ ತಾರತಮ್ಯವನ್ನು ಮಾಡುತ್ತಾ ಬಂದಿರುವುದು ಕಾಣಸಿಗುತ್ತದೆ. ಸುಶಿಕ್ಷಿತ ಮಹಿಳೆಯರಾಗಲು ಓದು-ಬರಹವನ್ನು ಕಡೆಗಾಣಿಸಲಾಗಿದೆ !

ವಿಕ್ರಮ ಜಾತಿಯ ಪುರುಷರಿಗೆ ಮೀಸಲಿದ್ದ 'ಶಿಕ್ಷಣ ಪದ್ಧತಿಯು ಬ್ರಿಟಿಷರ ಆಗಮನದಿಂದ ಸಡಿಲವಾದರೂ, ಧರ್ಮದ ನೆಪದಲ್ಲಿ, ಬ್ರಾಹ್ಮಣ ಸಮುದಾಯದ ದೃಷ್ಟಿಯಲ್ಲಿ ಮಹಿಳೆಯರು ಅಸ್ಪೃಶ್ಯರಲ್ಲಿ ಅಸ್ಪೃಶ್ಯಳು. ಒಂದು ರೀತಿಯಲ್ಲಿ ಹಿಂದೂ ಧರ್ಮವೇ ಮಹಿಳೆಯರನ್ನು ಭ್ರೂಣ ಅವಸ್ಥೆಯಿಂದಲೇ ತಿರಸ್ಕಾರದ ನೋಟ ಬೀರಿ, ಕಡೆಗಾಣಿಸಲ್ಪಟ್ಟ ವರ್ಗವಾಗಿದೆ.

ಇಡೀ ಮಾನವ ಜನಾಂಗದ ಸೃಷ್ಟಿಯ ಮೂಲ ಪುರುಷಳಾದ ಸ್ತ್ರೀಯರ ಸಂಕುಲವನ್ನು ತಾಯಿ, ಹೆಂಡತಿ, ತಂಗಿ, ನಾದಿನಿ, ಯಾವ ಸ್ಥಾನ-ಮಾನವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹೆಣ್ಣಿನ ಮುಖದ ಧರ್ಮದ ಮಸಿ ಲೇಪನಯಿಂದ ಅವಳ ಚಿಂತನೆ, ಭಾವನೆ, ಬಯಕೆಗಳಿಗೆ ಕತ್ತರಿ ಹಾಕುತ್ತ ಬಂದು—ತಿಳಿಯುವ, ಮಾತನಾಡುವ ಸ್ವಚ್ಛಂದವಾಗಿ ಬದುಕುವ, ಪುರಾಣ-ಶಾಸ್ತ್ರ-ವೇದಗಳನ್ನು ಅವಳು ಪಠಿಸದಂತೆ, ಕೇಳದಂತೆ, ಅರ್ಥೈಸದಂತೆ, ಕಪ್ಪು ಕೋಣೆಯಲ್ಲಿ ಕುಳಿತು ಬೆಳಕನ್ನು ಕತ್ತಲಾಗಿಸುವ ಕುಟಿಲೋಪಾಯಗಳಿಂದ ಈ ಸಮಾಜವು ಹೆಣ್ಣು ಎಂದರೆ ಕೇವಲ ದುರಂತದವಳು, ನತದೃಷ್ಟಗಳು, ಬಲಹೀನಳು, ಕೆಲಸಕ್ಕೆ ಬಾರದವಳು, ಬರೀ ಕಾಮದ ವಸ್ತು ಮಾತ್ರ—ಹೀಗೆ "neglected class" ನಂತೆ ಭಾವಿಸಿದೆ.

ಯಾರು ಈ ದೇಶದಲ್ಲಿ ಬುದ್ಧಿವಂತರು, ಪುರಾಣ ಪುಣ್ಯಕತೆಗಳನ್ನು ಓದುವರು, ಮೇಧಾವಿಗಳು, ಶ್ರೇಷ್ಠರು ಉದ್ಧಾರಕರು, ತಿಳುವಳಿಕೆ ನೀಡುವವರು-ಎಂದು ಹೇಳಿಕೊಂಡು ತಿರುಗುತ್ತಿರುವ ವರ್ಗವೊಂದರಲ್ಲಿಯೇ ಹೆಣ್ಣನ್ನೂ ಗೃಹಬಂಧನದಲ್ಲಿರಿಸಿ ಪ್ರಗತಿ ಆಲೋಚನೆಗಳಿಗೆ ಕಡಿವಾಣ, ಊಟ-ಉಪಹಾರಗಳಲ್ಲಿ ತಮಸ ಪದಾರ್ಥಗಳನ್ನು ಮುಟ್ಟದಂತೆ, ಜಪ-ತಪ-ಮಂತ್ರಗಳನ್ನು ಕೆಲವನ್ನು ನಿಷಿದ್ಧ ಭಾಗವೆಂದು ಅ(ನ)ಧಿಕೃತ ಘೋಷಿಸಲಾಗಿದೆ. !

ಗಾಯತ್ರಿ ಜಪವು ಅದರಲ್ಲಿ ಪ್ರಮುಖ ನಿಷಿದ್ಧಸಲ್ಪಟ್ಟ ಮಂತ್ರ : ಗಾಯಿತ್ರಿ ಒಂದು ಹೆಣ್ಣು. ಹೆಣ್ಣೇ ಗಾಯಿತ್ರಿ ಜಪವನ್ನು ಉಚ್ಚರಿಸಲು, ಓದಲು-ಕಿವಿಗೆ ಬಿದ್ದರೂ ತಾಕಿದರೂ ಮಹಾಪಾಪವೆನ್ನುವಂತೆ 'ಬೆದರು ಬೊಂಬೆ' ಇಟ್ಟಿರುವ ಪಂಡಿತರು, ಆಚಾರ್ಯರು, ಶಾಸ್ತ್ರಿಗಳು,

ಆ ಮಂತ್ರದಲ್ಲಿ ಅಡಗಿರುವುದೇನು? ಅದರ ಸಾರವೇನು? ಅದರಲ್ಲಿರುವ ಮಾನವೀಯ ಅಂಶ ಯಾವುದು ? ಗಾಯತ್ರಿಯನ್ನು ರಹಸ್ಯವಾಗಿಡುವ ಅಗತ್ಯವೇನು ?

ಓಂ ಭೂ ರ್ಭುವಸ್ಸುವಃ
ಓಂ ತತ್ಸವಿತುರ್ವರೇಣ್ಯಂ
"ಭರ್ಗೋದೇವಸ್ಯ ಧೀಮಹಿಃ
"ಧಿಯೋ ಯೋನಃ ಪ್ರಚೋದಯಾತ್

ಗಾಯತ್ರಿಯ ಅರ್ಥವಿಷ್ಟೆ :

ಓ ತೇಜಸ್ಸೇ ನಿನಗೆ ನಾನು ನಮಸ್ಕರಿಸುತ್ತೇನೆ. ನೀನು ಸರ್ವಶ್ರೇಷ್ಠ, ನಿನಗಿಂತ ಶ್ರೇಷ್ಠರಿಲ್ಲ. ನನ್ನ ಬುದ್ಧಿಯನ್ನು ಪ್ರಚೋದಿಸು. ಇದು ಗಾಯತ್ರಿ ಮಂತ್ರ.

ಗಾಯಿತ್ರಿ ಮಂತ್ರದಲ್ಲಿ ಮನುಷ್ಯನಾದವನು ಮಾನವೀಯತೆ ಗುಣವುಳ್ಳವನು, ನಂಬಿಕೆಯಿಟ್ಟವನು, ಜಪಿಸಲೇಬೇಕು. ಇದರ ಜಪ ಓದುವುದು, ಕೇಳುವುದು ಮಹಾ ಅಪರಾಧವೇಕಾಯಿತು ? ಹೆಣ್ಣು ಬುದ್ಧಿವಂತಳಾದರೆ ? ಗಂಡಿನ ಸರಿಸಮಾನ ಸ್ಥಾನ-ಮಾನ ಗಳಿಸಿದರೆ ? ಧರ್ಮದಲ್ಲಿನ ಕೊಳಕನ್ನು ಕಂಡುಹಿಡಿದರೆ ? ಪುರುಷರ ನಪುಂಸಕತನ ಬಯಲಾಗುವ ಭಯವೇ ? ಅಥವಾ ಧರ್ಮ ಶಾಸ್ತ್ರಗಳ ಸಂಕೇತಗಳಿಂದ ಬಿಗಿಯಲು ಹೊರಟ ಕುಕೃತ್ಯದ ಹೇಡಿತನವೆ ? ಅಥವಾ ಕೀಳರಿಮೆಯನ್ನು ಒಪ್ಪಿಕೊಂಡ ಮಹಿಳೆಯರ ಮನಸ್ಥಿತಿಯೋ ? 'ಧರ್ಮ'ದ ನಿಜವಾದ ವ್ಯಾಖ್ಯಾನವೇನು ?

ಧರ್ಮದ ಪರಿಕಲ್ಪನೆ "ಮನುಷ್ಯ-ಮನುಷ್ಯರನ್ನು ಒಗ್ಗೂಡಿಸುವುದು". ಮಾನವೀಯತೆ ಗುಣಗಳಿಂದ ಹೃದಯಗಳನ್ನು ಬೆರೆಯುವುದು. ಧರ್ಮದ ದೃಷ್ಟಿ ಗಂಡು ಹೆಣ್ಣು ಒಂದೇ ನಾಣ್ಯದ ಎರಡು ಮುಖವಿದ್ದಂತೆ ಸರಿ.

ಮಧು ನಗರ್ಲೆ

15ನೇ ಪುಟದಿಂದ

ಕೇವಲ ಪುರುಷರಿಗೆ ಮಾತ್ರ

ಮಹಿಳಾ ಗ್ರಾಮೀಣ ಅರಣ್ಯ ಕಾರ್ಮಿಕರಲ್ಲಿ ಯಾರೊಬ್ಬರಿಗೂ ಕೊನೇಪಕ್ಷ, ಸಾಮಾಜಿಕ ಅರಣ್ಯದ ಮೇಲ್ವಿಚಾರಣೆಯ ಜವಾಬ್ದಾರಿಯನ್ನೂ ಕೊಟ್ಟಿರಲಿಲ್ಲ. ಆದರೆ ಎಷ್ಟೋ ವರ್ಷ ಅನುಭವದಲ್ಲಿ ಅವರಿಗಿಂತ ಕಿರಿಯರಾದ ಅವರ ಪುರುಷ ಸಹೋದ್ಯೋಗಿಗಳು ಹುದ್ದೆಯ ಶ್ರೇಣಿಯಲ್ಲಿ ಮೇಲಿದ್ದರು. ಮಹಿಳಾ ಗ್ರಾಮೀಣ ಅರಣ್ಯ ಕಾರ್ಮಿಕ ಹುದ್ದೆಗಳು ಸೃಷ್ಟಿಯಾಗಿದ್ದರೂ, ಅವರ ಬಡ್ತಿಯ ವಿಚಾರದಲ್ಲಿ ಮಾತ್ರ ಅಸ್ಪಷ್ಟತೆಯೇ ಇದೆ.

ಕೇಂದ್ರ ಪರಿಸರ ಹಾಗು ಅರಣ್ಯ ಖಾತೆಯು ಮಹಿಳೆಯರ ನೇಮಕಾತಿಯ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ, ರಾಜ್ಯ ಅರಣ್ಯ ಇಲಾಖೆಗಳಿಗೆ ಸ್ಪಷ್ಟವಾದ ಮಾರ್ಗದರ್ಶನವನ್ನು ನೀಡಬೇಕಾಗಿದೆ. ಇಲ್ಲವಾದಲ್ಲಿ ಅರಣ್ಯ ಇಲಾಖೆಗಳು "ಕೇವಲ ಗಂಡಸರಿಗೆ ಮಾತ್ರ" ಎನ್ನುವ ಅಲಿಖಿತ ನೀತಿಯನ್ನು ಪರಿಣಾಮಕಾರಿಯಾಗಿ ಮುಂದುವರೆಸಿಕೊಂಡೇ ಹೋಗುತ್ತೇವೆ.

— **ಮಧುಸರೀನ್**

ಸ್ವಾಯತ್ತ ಸಂಘಟನೆಯ ಅವಶ್ಯಕತೆ

ಸ್ತ್ರೀಮುಕ್ತಿ ಚಳವಳಿಯ ಸಂಘಟನೆಯ ಬಗ್ಗೆ ಇಷ್ಟೊಂದು ವಿಸ್ತಾರವಾಗಿ ಹೇಳುವ ಕಾರಣವೆಂದರೆ ಸ್ವಾಯತ್ತ ಸಂಸ್ಥೆಗಳಿಂದ ನಡೆದ ಚಳವಳಿಯೆಂದು ಇದಕ್ಕೆ ಅತ್ಯಂತ ಮಹತ್ವವಿದೆ. ಇದರ ಬಗ್ಗೆ ತಪ್ಪು ತಿಳುವಳಿಕೆಗಳೂ ಸಾಕಷ್ಟಿವೆ. ಚಳುವಳಿಗೆ ಹಾನಿಯನ್ನುಂಟು ಮಾಡುವ ಘಟನೆಗಳೂ ನಡೆದವು. ಒಟ್ಟಿನಲ್ಲಿ ಪ್ರಾರಂಭದಲ್ಲಿ ಲಾಭವಾಯಿತೆಂದೇ ಹೇಳಬಹುದು. ಸ್ವಾಯತ್ತತೆ, ಶಾಸನ ಸಂಸ್ಥೆಯಿಂದಲೋ, ಪಕ್ಷಗಳಿಂದಲೋ ಅಥವಾ ಪುರುಷರಿಂದಲೋ ಇತ್ಯಾದಿ ವಿಧವಿಧದ ಸ್ವಾಯತ್ತತೆಯ ವ್ಯಾಖ್ಯೆಯನ್ನು ಮುಂದಿಡಬಹುದು. ಮುಖ್ಯವಾದ ಸಂಗತಿಯೆಂದರೆ : ಇಂದಿನವರೆಗೆ ಸ್ತ್ರೀಯರು ತಮ್ಮನ್ನು ಪುರುಷರ ದೃಷ್ಟಿಕೋನದಿಂದಲೇ ಕಾಣುತ್ತ ಬಂದಿದ್ದಾರೆ. ಭಾಷೆ, ಸಂಕಲ್ಪನೆ, ತತ್ವ ಇವೆಲ್ಲವೂ ಪುರುಷರ ಸಂಸ್ಕೃತಿಯ ವರ್ಚಸ್ಸಿನಲ್ಲಿ ನಿರ್ಮಿತವಾಗಿದೆ. ಆದ್ದರಿಂದ ಸ್ತ್ರೀಯರಿಗೆ ತಮ್ಮ ಶೋಧವನ್ನು ಮಾಡಿಕೊಳ್ಳುವುದು ಸಾಧ್ಯವಾಗಲಿಲ್ಲ. ಸ್ತ್ರೀಯರ ಸತ್ವವು ನಿಶ್ಚಿತವಾಗಿ ಯಾವುದರಲ್ಲಿದೆ ? ಅವರಿಗೆ ಏನು ಸಾಧಿಸಬೇಕಾಗಿದೆ ? ಅವರ ಸಮಸ್ಯೆಗಳು ಯಾವುವು ? ಇವುಗಳ ಉಹಾಪೋಹವನ್ನು ಸ್ತ್ರೀಯರು ಒಟ್ಟು ಸೇರಿ ಮಾಡಿದರೆ ಅವರಿಗಾಗುವ ಸೂಕ್ಷ್ಮ ಅನ್ಯಾಯ ಗೋಚರವಾಗುವುದು. ಈ ಸಂಗತಿಗಳನ್ನು ಸ್ತ್ರೀಯರು ಅರ್ಥ ಮಾಡಿಕೊಂಡಿದ್ದಾರೆ.

ಇನ್ನೊಂದು ಸಂಗತಿ ಎಂದರೆ ಸ್ತ್ರೀಯರ ಹಿಂದೆ ಉಳಿಯುವ ರೂಢಿಯಿಂದ ಸಭೆಯಲ್ಲಿ ಸುಸಂಗತ ರೀತಿಯಲ್ಲಿ ಮಾತನಾಡುವ ಕುಶಲತೆಯನ್ನು ಹೊಂದಿರಲಿಲ್ಲ. ನಿಖರವಾಗಿ ತಮ್ಮ ಅಭಿಪ್ರಾಯವನ್ನು ಮುಂದಿಡಲು ಅವರಿಗೆ ಕೆಲವು ಅವಧಿ ಬೇಕಾಗಿರುತ್ತಿತ್ತು, ಆದ್ದರಿಂದ ಸಮ್ಮಿಶ್ರ ಸ್ತ್ರೀ-ಪುರುಷರ ಸಂಘಟನೆಗಳಿಗಿಂತ, ಸ್ತ್ರೀಯರ ಸಂಘಟನೆಗಳಲ್ಲಿ ತಮ್ಮ ಅಭಿಪ್ರಾಯವನ್ನು ಮುಚ್ಚುಮರೆ ಇಲ್ಲದೆ ಅವರು ತಿಳಿಸಬಹುದು. ಇಷ್ಟೇ ಅಲ್ಲದೆ ಸಭೆ ನಡೆಸುವುದು, ಚರ್ಚೆ ನಡೆಸುವುದು, ಇವೆಲ್ಲದರಅನುಭವ ಸ್ತ್ರೀಯರಿಗೆ ಆಗುವುದು. ಆದ್ದರಿಂದಲೇ ಪುರುಷರಹಿತ ಸಂಘಟನೆ-ಸ್ತ್ರೀ ಸಂಘಟನೆಗಳು ಸ್ವಾಯತ್ತ ಸಂಘಟನೆಯನ್ನು ಪ್ರಾರಂಭಿಸಬೇಕು. ತೀರ್ಮಾನಗಳನ್ನು ತಾವೇ ತೆಗೆದುಕೊಳ್ಳಬೇಕು. ಅವಶ್ಯಕವೆನಿಸಿದರೆ ಮಾತ್ರ ಕಾರ್ಯವನ್ನು ಕೈಗೊಳ್ಳುವಾಗ "ಪುರುಷರ ಜೊತೆ ಹೊಂದಾಣಿಕೆ ಮಾಡಿಕೊಳ್ಳಬಹುದು" ಈ ಪ್ರಕಾರದ ಅಭಿಪ್ರಾಯ ಅನೇಕ ಸ್ತ್ರೀ ಸಂಘಟನೆಗಳದ್ದಾಗಿತ್ತು.

ರಾಜಕೀಯ ಪಕ್ಷದೊಳಗೆ ಕೂಡ ಸ್ತ್ರೀಯರಿಗೆ ಸಾಕಷ್ಟು ಅವಕಾಶ ಕೊಡುತ್ತಿರಲಿಲ್ಲ. ಪಕ್ಷದ ಧೋರಣೆ-ನಿಯಮಗಳ ಚೌಕಟ್ಟಿನಲ್ಲಿ ಸ್ತ್ರೀಯರ ಸಮಸ್ಯೆಗಳನ್ನು ಬದಿಗೆ ತಳ್ಳುತ್ತಾರೆ ಎಂಬ ಅನುಭವ ಅನೇಕರಿಗೆ ಆಗುತ್ತಿತ್ತು. ಇಂಥ ಸಂದರ್ಭದಲ್ಲಿ ಪಕ್ಷವನ್ನು ಬಿಟ್ಟು ಬಿಡಬೇಕು, ಸ್ತ್ರೀಯರ ಸ್ವತಂತ್ರ ಸಂಘಟನೆಯನ್ನು ರಚಿಸಬೇಕು. ಪಕ್ಷದ ಅಧಿಕಾರಿಗಳೊಡನೆ ಚರ್ಚೆ ಮಾಡಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು, ಪಕ್ಷದ ಸರ್ವ ಸಾಧಾರಣ ಸಭೆಯಲ್ಲಿ ವಿಚಾರ ವಿನಿಮಯ ನಡೆಯಿಸಿ, ಸ್ತ್ರೀಯರ ಪರವಾಗಿ ಮಾತನಾಡಿ ಪಕ್ಷದ ಧೋರಣೆಗಳಲ್ಲಿ ಬದಲಾವಣೆ ಮಾಡಿಸಬೇಕು ಎಂದೂ ಕೆಲವು ಸ್ತ್ರೀಯರು ಆ ಪದ್ಧತಿಯನ್ನು ಅನುಸರಿಸಿದರು.

ಶಾಸನ ಸಂಸ್ಥೆಯಿಂದ ಅನುದಾನವನ್ನು ಪಡೆದರೆ ಸರಕಾರದ ನಿಯಮಗಳ ಒತ್ತಡ ಬರುತ್ತದೆ. ಶಾಸನ ಸಂಸ್ಥೆಗಳಲ್ಲಿಯೂ ಪುರುಷರ ವರ್ಚಸ್ಸು ಇದ್ದೇ ಇದೆ. ಸ್ತ್ರೀಯರಿಗೆ ಸ್ವಂತ ವಿಚಾರಗಳನ್ನು ಇಟ್ಟುಕೊಳ್ಳಲು ಪುರುಷರು ಅವಕಾಶ ಕೊಡಲಾರರು. ಆದ್ದರಿಂದ ಅನುದಾನವಾಗಿ ಕೊಟ್ಟ ಹಣವನ್ನು ಸ್ವೀಕರಿಸಬಾರದು ಎಂಬ ಧೋರಣೆಯನ್ನು ಮೊದಲು ಇಟ್ಟು ಕೊಂಡಿದ್ದರು. ಅನಂತರದ ಕಾಲದಲ್ಲಿ ಅನುದಾನ ಸ್ವೀಕರಿಸಿದರೂ ಸ್ತ್ರೀಯರು ತಮ್ಮ ಅಭಿಪ್ರಾಯದಂತೆ ಕಾರ್ಯ ಮಾಡಬೇಕೆಂಬ ಸ್ವಾತಂತ್ರ್ಯವನ್ನಿಟ್ಟುಕೊಂಡರು. ಇದಕ್ಕಾಗಿ ಆಂದೋಲನ ಮಾಡಬೇಕಾಯಿತು. ಕಾನೂನಿನಲ್ಲಿ ಬದಲಾವಣೆ ಮಾಡಿಸಲಾಯಿತು. ಸ್ತ್ರೀಯರಿಗೆ ಸಂಬಂಧಪಟ್ಟ ಸರಕಾರದ ಕಾರ್ಯಕ್ರಮಗಳಲ್ಲಿ, ಚಳುವಳಿಯಲ್ಲಿ ಭಾಗ ವಹಿಸುವ ಸ್ತ್ರೀಯರು ನೌಕರಿ ಮಾಡಬೇಕೆ ? ಮಾಡಬಾರದೆ ? ಎಂಬ ಬಗ್ಗೆ ಸಾಕಷ್ಟು ಚರ್ಚೆ ವಿವಾದ ನಡೆ

ಬಂತೆ ಕಾಣುತ್ತದೆ. ಒಮ್ಮೆ ನೌಕರಿಯಲ್ಲಿ ಸೇರಿಕೊಂಡರೆ ಅಂತಹ ವೃತ್ತಿಯಿಂದ ಚಳುವಳಿಯ ಯಾವ ಕಾರ್ಯ ಕ್ರಮವೂ ನಡೆಯುವುದಿಲ್ಲ ಎಂಬುದು ಎಲ್ಲೆಡೆಯ ಅನು ಭವವಿತ್ತು. ಆದರೆ ಸ್ತ್ರಿ-ಮುಕ್ತಿ ಚಳುವಳಿಗಾರರು ಹೊಸ ತಂತ್ರವನ್ನು ಕಂಡುಕೊಂಡರು. ಸಣ್ಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರಬೇಕು. ನೌಕರಿಯಲ್ಲಿ ಕೆಲಸದ ಬಗ್ಗೆ, ಧೋರಣೆಯ ಬಗ್ಗೆ ಸಂಸ್ಥೆಯಲ್ಲಿ ಚರ್ಚಿಸಿ ನಿರ್ಣಯ ಕೈ ಕೈಗೊಳ್ಳಬೇಕೆಂದಾಯಿತು. ಹೀಗೆ ಮಾಡುವುದರಿಂದ ಚಳುವಳಿಯ ಉದ್ದೇಶಗಳನ್ನೂ, ಮಾರ್ಗಗಳನ್ನೂ ಸರಕಾರೀ ಕೆಲಸದಲ್ಲಿಯೂ ಉಪಯೋಗಿಸಬಹುದೆಂದು ಸ್ತ್ರೀಯರಿಗೆ ಗೊತ್ತಾಯಿತು. ಮಾತುಕತೆ ನಡೆಸುವ ಪ್ರಸಂಗ ಬಂದರೆ ನೌಕರಿಗೆ ರಾಜೀನಾಮೆ ಕೊಡಲು ಸಿದ್ಧ ರಾಗಿರಬೇಕೆಂದು ನಿಶ್ಚಯಿಸಿದರು.

ಈ ಎಲ್ಲಾ ಸಿದ್ಧತೆಗಳು ನಡೆದಿರುವಾಗಲೇ "ಸ್ತ್ರೀ ಮುಕ್ತಿಯ ಸ್ತ್ರೀಯರು ಪುರುಷ ದ್ವೇಷಿಗಳು ಎಂಬ ಪ್ರಚಾರ ನಡೆಯಿತು. ಪಕ್ಷದ ರಾಜಕಾರಣದಲ್ಲಿ ಕೆಲವು ಶರತ್ತುಗಳನ್ನು ಇಟ್ಟುಕೊಂಡು ಕೆಲಸ ಮಾಡಲು ಬಯಸಿದ್ದರಿಂದ ಸ್ತ್ರೀಯರು ಸಮಾಜ ಪರಿವರ್ತನೆಯ ಮುಖ್ಯ ರಾಜಕಾರಣದಲ್ಲಿ ಭಾಗವಹಿಸುತ್ತಿಲ್ಲವೆಂದು ಯೋಚಿಸಲಾಯಿತು. ಇದು ಪೂರ್ವಾಗ್ರಹ ಪ್ರೇರಿತ ವಿಚಾರ ಎಂದು ಬೇರೆ ಹೇಳಬೇಕಾಗಿಲ್ಲ. ಇಂದಿನವರೆಗೆ ಸುಮ್ಮನೆ ಇರುತ್ತಿದ್ದ ಕಾರ್ಯಕರ್ತರು ಒಮ್ಮೆಲೇ ತಲೆ ಎತ್ತಿ ಮಾತನಾಡುವುದನ್ನು, ತಮ್ಮ ಹೇಳಿಕೆಯನ್ನು ಆತ್ಮ ವಿಶ್ವಾಸದಿಂದ ಮಂಡಿಸುವುದನ್ನು ಕಂಡು ಪಕ್ಷದ ಸಹ ಕಾರ್ಯಕರ್ತ ಪುರುಷರು ಚಕಿತರಾದರು. ಪುರುಷ ಅಧಿಕಾರಿಗಳಿಗೆ ಅನುಕೂಲವಿದ್ದ ಸ್ತ್ರೀಯರು ಗೊಂದಲಕ್ಕೆ ಒಳಗಾದರು. ಅವರು ಪಕ್ಷ ದ್ರೋಹಿಗಳೆಂದು, ಆಕ್ರಮಣ ಕಾರಿಗಳೆಂದು ಕಠೋರರೆಂದು ದೂಷಿಸಿದರು.

ಸ್ತ್ರೀ ಮುಕ್ತಿ ಚಳವಳಿಯಲ್ಲಿ ಪುರುಷ ದ್ವೇಷಿಗಳು ಇರಲಿಲ್ಲವೆಂದಲ್ಲ, ದ್ರೋಹಿಗಳು ಕೆಲವರಿದ್ದರು. ಯಾವುದೇ ಚಳುವಳಿಯಲ್ಲಿ ಸಂಪೂರ್ಣ ಏಕರೂಪತೆ ಇರುವುದು ಸಾಧ್ಯವಿಲ್ಲ. ತೀರಾ ಎಡಪಂಥದ ಚಳವಳಿಯಲ್ಲಿಯೂ ಉಗ್ರವಾದಿಗಳು, ಮೃದು ಮತದವರು ಇದ್ದೇ ಇರುತ್ತಾರೆ. ಆದರೆ ಸಶಕ್ತ ಮತ ಪ್ರಣಾಲಿಯೂ ಇರುತ್ತದೆ. ಅದೇ ಪ್ರಕಾರ ಸ್ತ್ರೀಮುಕ್ತಿ ಚಳುವಳಿಯಲ್ಲಿ ಸಾಧಾರಣವಾಗಿ ಮೂರು ಬಗೆಯ ಪ್ರವಾಹಗಳಿದ್ದವು.

1) ಸಮಾಜವಾದಿ (ಮಾರ್ಕ್ಸವಾದಿ) ಸ್ತ್ರೀಮುಕ್ತಿ ವಾದಿಗಳು.

2) ಉಗ್ರಗಾಮಿ ಸ್ತ್ರೀ ಮುಕ್ತಿವಾದಿಗಳು

3) ಕ್ರಾಂತಿಕಾರಿ ಸ್ತ್ರೀಮುಕ್ತಿ ವಾದಿಗಳು

ಇವುಗಳಲ್ಲಿ ಸಮಾಜವಾದಿ ಸ್ತ್ರೀ ಮುಕ್ತಿವಾದವು ಪ್ರಬಲ ವಾಗಿದೆ. ಅದರ ಬಗ್ಗೆ ತುಸು ಹೇಳ ಬಯಸುತ್ತೇನೆ.

ಉಗ್ರಗಾಮಿ ಸ್ತ್ರೀ ಮುಕ್ತಿವಾದಿಗಳು ಶೋಷಣೆ ಮಾಡುತ್ತಿದ್ದ ಸಮಾಜ ರಚನೆಯನ್ನು ನಾಶಗೊಳಿಸ ಬೇಕೆಂದು ಬಗೆಯುತ್ತಾರೆ. ಅವರ ಅಭಿಪ್ರಾಯಂತೆ ಪುರುಷರ ವರ್ಚಸ್ಸು (ಪ್ರಭಾವ) ಮೊಟ್ಟ ಮೊದಲನೆಯ ಶತ್ರು. ಅದನ್ನು ಮೊದಲು ಇಲ್ಲದಾಗಿ ಮಾಡಬೇಕೆಂದು ಅದರ ಮತ. ಕಾರ್ಮಿಕರ ಚಳವಳಿ, ಕಪ್ಪು ವರ್ಣದವರ ಚಳುವಳಿಗಳು ತಮ್ಮ ತಮ್ಮ ವತಿಯಿಂದ ಬಂಡವಾಳ ಶಾಹಿಯ ವಿರೋಧವಾಗಿ ಕಾರ್ಯವನ್ನು ಮಾಡುತ್ತಲೇ ಇವೆಯೆಂದು ಉಗ್ರಗಾಮಿ ಸ್ತ್ರೀ ಮುಕ್ತಿವಾದಿಗಳ ಮತ. ಈ ಗುಂಪಿಗೆ ಸೇರಿದ ಸ್ತ್ರೀಯರು ತಮ್ಮ ವೈಯಕ್ತಿಕ ಜೀವನದ ಮಟ್ಟಿಗೆ ಪುರುಷ ದ್ವೇಷ ತೋರುವುದಿಲ್ಲ. ಪುರುಷರ ವರ್ಚಸ್ಸು, ಇದನ್ನೇ ಒಂದು ಪ್ರಮಾಣ ವಾಗಿಟ್ಟುಕೊಂಡು ಅವರು ಈ ವರೆಗೆ ಸ್ತ್ರೀಯರ ಮೇಲಿನ ಅತಿಸೂಕ್ಷ್ಮ ಅನ್ಯಾಯಗಳ, ನಿರ್ಬಂದಗಳ ವಿಶ್ಲೇಷಣೆ ಮಾಡಿದ್ದಾರೆ,

ಮೂರನೆ ಪ್ರವಾಹವು ನಿಜವಾದ ಪುರುಷದ್ವೇಷದ್ದು. ವ್ಯಕ್ತಿಗತ ಜೀವನದಲ್ಲಾಗಲೀ, ಸಾಮಾಜಿಕ ಜೀವನ ದಲ್ಲಾಗಲೀ ಪುರುಷ ದ್ವೇಷವೊಂದನ್ನು ಉದ್ದೇಶ ಮಾಡಿ ಕೊಂಡವರಿರುತ್ತಾರೆ. ಸ್ತ್ರೀಯರ ಮೇಲೆ ನಡೆದ ಹಿಂಸಾ ಚಾರಗಳ ವಿರುದ್ಧ ಇವರ ಕಾರ್ಯವಿಧಾನ ರೂಪುಗೊಳ್ಳು ತ್ತಿರುತ್ತದೆ,

ಈ ಸ್ವತಂತ್ರ ಸಂಸ್ಥೆಗಳ ಚಳವಳಿಯಿಂದಾದ ಲಾಭ ವೆಂದರೆ ಇವು ಜೀವಂತವಾಗಿ ಕಾರ್ಯ ನಡೆಸುತ್ತವೆ.

ಹೊಸ ಹೊಸ ಸಮಸ್ಯೆಗಳು ಉಂಟಾದಾಗ ಸಮಸ್ಯೆಗಳ ವ್ಯಾಪ್ತಿ ಹಾಗೂ ಗಾಂಭೀರ್ಯ ಗಮನಕ್ಕೆ ಬರಲು ಅನುಕೂಲವಾಗುತ್ತದೆ. ಸಮಸ್ಯೆಗಳಲ್ಲಿ ತಾರತಮ್ಯ ಇಡಲಾಗುವುದಿಲ್ಲ. ವಾದ ವಿವಾದಗಳು ಉದ್ಭವಿಸುವುದಿಲ್ಲ. ಆಯಾ ಸಂಸ್ಥೆಗಳಿಗೆ, ಆಯಾ ಸಮಸ್ಯೆಗಳು ಸಂಲಗ್ನವಿರುತ್ತವೆ. ಹೀಗಾಗಿ ಎಲ್ಲ ಸಮಸ್ಯೆಗಳ ಬಗ್ಗೆ ಆಂದೋಲನಗಳು ನಡೆದು ಸಮಾಜದ ಕಣ್ಣು ಮುಂದೆ ಬರುತ್ತವೆ.

ಇನ್ನೊಂದು ರೀತಿಯಲ್ಲಿ ಈ ಕ್ರಮವನ್ನು ಸತತ ಜಾರಿಯಲ್ಲಿಡುವುದು ಕಷ್ಟಕರವಾಗುತ್ತದೆ. ಮಹತ್ವದ ಆಂದೋಲನೆಗಾಗಿ ಸಾರ್ವಜನಿಕ ಮತವನ್ನು ಅನುಕೂಲ ಮಾಡಿಕೊಳ್ಳಲು ಬಹು ದೊಡ್ಡ ಸಂಖ್ಯೆಯಲ್ಲಿ ಸಂಘಟಿತರಾಗಿ ಕಾರ್ಯ ಮಾಡುವ ಅವಶ್ಯಕತೆ ಇರುತ್ತದೆ. ಇದು ಕಠಿಣ ಕೆಲಸ. ಸ್ತ್ರೀಯರ ಎಲ್ಲ ಸಮಸ್ಯೆಗಳು ಮಹತ್ವದವೆನಿಸಿದರೂ ಆಯಾ ಕಾಲದ ಸಮಾಜದಲ್ಲಿ ನಡೆದ ರಾಜಕಾರಣದಿಂದಾಗಿ ಆಗುವ ಸ್ತ್ರೀಯರ ಮೇಲಿನ ಪರಿಣಾಮಗಳನ್ನು ಲಕ್ಷಿಸಿ ಕೂಡಲೇ ಕಾರ್ಯರಂಗಕ್ಕೆ ಇಳಿಯುವ ಅವಶ್ಯಕತೆ ಅಧಿಕವಿರುತ್ತದೆ. ಸಂದರ್ಭಕ್ಕೆ ಸರಿಯಾಗಿ ಕಾರ್ಯ ಮಾಡಬೇಕಾಗುತ್ತದೆ. ಜೊತೆಗೆ ಅಧಿಕಾರವೂ ಇರಬೇಕು. ಈ ಎಲ್ಲಾ ಅನುಕೂಲತೆಗಳು ಸ್ವಾಯತ್ತ ಸಂಸ್ಥೆಗಳಿಗೆ ಇರುವುದಿಲ್ಲ.

ಚಳವಳಿಯನ್ನು ಮುಂದುವರಿಸಿದಾಗ ಆಗಬಹುದಾದ ಲಾಭದತ್ತ ಬಯ್ಯುವ ಮತ್ತು ಹಾನಿಗಳನ್ನು ತಪ್ಪಿಸಲು ಪದ್ಧತಿಯನ್ನು ಕಂಡು ಹಿಡಿಯಬೇಕಾಗುತ್ತದೆ.

ಸ್ತ್ರೀ ಸಂಚಯ
ಸ್ತ್ರೀ-ಪುರುಷ ಛಾಯಾದಾತಾರ್
ಅನುವಾದ : **ಸರಸ್ವತಿ ರಿಸಬೂಡ**
ಪ್ರಕಾಶನ : ಇಳಾ ಪ್ರಕಾಶನ
ಚಾಮರಾಜಪೇಟೆ

ಅಮ್ಮ . . . .

ಕದದ ಹಿಂದೆಯೇ ನಿಂತು ಜೀವನ ಸವೆಸಿದೆ
ಸುಡುವ ಬಿಸಿಲು ಕಾದ ನೆಲಗಳೆಲ್ಲ
ಕದದ ಹಿಂದೆಯೇ ಕಾಣಿಸಿದವು. ಅಲ್ಲವೇನು ?
ಯಾವಾಗಲೂ 'ಮೌನಮ್ಮ'ನಾಗೇ ಉಳಿದವಳು ನೀನು.
ಕಸಮುಸುರೆ, ಸಾರಣೆ, ರಂಗೋಲಿ, ಬಸಿರು, ಬಾಣಂತಿ,
ಎಷ್ಟೊಂದು ಜವಾಬ್ದಾರಿಗಳು ನಿನಗೆ ?
ಅಕ್ಕಿ, ಬೇಳೆ, ಚಕ್ಕುಲಿ, ಮುಚ್ಚೋರೆ, ಅರಳು ಸಂಡಿಗೆ,
ಉಪ್ಪಿನಕಾಯಿಗಳ, ವಾಸನೆಯಲ್ಲದೆ ಬೇರೆ
ವಾಸನೆಯು ಮೂಗು ಹಿಡಿಯಲಿಲ್ಲ ಅಲ್ಲವೇ ?
ಎಲ್ಲರಿಗೂ ಅಕ್ಕರೆಯ ಅಮ್ಮನಾದರೂ
'ಅಲ್ಲ' ಅನ್ನದ, ಎಲ್ಲಕ್ಕೂ 'ಹೌದಮ್ಮ'ನೇ ಆಗುಳಿದದ್ದು
ಸೋಜಿಗವಲ್ಲವಾದರೂ ಸತ್ಯವಲ್ಲವೇ ?
ನಿನ್ನ ಬಡ ಮೆದುಳಿಗೆ ಜಡತನ ತಂದವರ ಬಗ್ಗೆ
ಒಮ್ಮೆಯಾದರೂ ತಲೆಕೆಡಿಸಿಕೊಂಡದ್ದುಂಟಾ ನೀನು ?

— **ದುರ್ಗಾಸುತೆ**

ಬೇಡದ ಹೆಣ್ಣುಮಗುವನ್ನು ನಮ್ಮ ಮಡಿಲಿಗೆ ಹಾಕಿ

ಹೆಣ್ಣು ಶಿಶುವಿನ ಹತ್ಯೆಯೆಂದರೆ, ಸೇಲಂ, ಸೇಲಂ ಎಂದರೆ ಹೆಣ್ಣು ಶಿಶು ಹತ್ಯೆಯೆಂದು ಸಮೀಕರಿಸುವಷ್ಟು ಕುಖ್ಯಾತವೆನಿಸಿದೆ ಈ ದುಷ್ಟಪದ್ಧತಿ. ಹೆಣ್ಣು ಶಿಶುವಿನ ಹತ್ಯೆಯನ್ನು ತಡೆಗಟ್ಟಲು ಸರ್ಕಾರ, ಸಾಮಾಜಿಕ ಕಾರ್ಯಕರ್ತರು, ಸ್ವಯಂ ಸೇವಾ ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ, ಈ ಪದ್ಧತಿಯನ್ನು ತಡೆಗಟ್ಟಲು ಸಾಧ್ಯವಾಗದಿರುವುದು ಸಮಸ್ಯೆಯು ಬೇರೂರಿರುವ ಆಳವನ್ನು ಪ್ರತಿಬಿಂಬಿಸುತ್ತದೆಯಲ್ಲದೆ ಸರ್ಕಾರ, ವಿವಿಧ ಸಂಘ ಸಂಸ್ಥೆಗಳ ಕಾರ್ಯಕ್ರಮದ ವೈಫಲ್ಯತೆಯನ್ನು ಎತ್ತಿತೋರಿಸುತ್ತದೆ.

ಸೇಲಂ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳನ್ನು ಹುಟ್ಟುತ್ತಿರುವ ಹಾಗೆ, ಹಾಲು ಉಣಿಸುವ ಬದಲು ವಿಷವನ್ನೆರೆದು ಕೊನೆಗೊಳಿಸುವ ಈ ಪದ್ಧತಿ ಸಾಕಷ್ಟು ಪ್ರಚಾರವನ್ನು ಗಳಿಸಿದೆ. ಕಿತ್ತು ತಿನ್ನುವ ಬಡತನದಿಂದಾಗಿ ಮಕ್ಕಳನ್ನು ಸಾಕುವುದು ಒಂದು ದೊಡ್ಡ ಹೊರೆಯಾಗುವುದರ ಜೊತೆಗೆ ಹೆಣ್ಣು ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿಸಿದ ಮೇಲೆ ವರದಕ್ಷಿಣೆಯನ್ನು ನೀಡಬೇಕಾಗುವುದರಿಂದ ಹೆತ್ತ ತಂದೆ ತಾಯಂದಿರು ಕಂದಮ್ಮಗಳನ್ನು ಕತ್ತು ಹಿಸುಕಿ ಕೊಲೆ ಮಾಡುವುದೇ ಯೋಗ್ಯವೆಂದು ತೀರ್ಮಾನಿಸುತ್ತಾರೆ. ಈ ಪದ್ಧತಿಯನ್ನು ನಿಲ್ಲಿಸಲು ಸರ್ಕಾರ, ಸಂಘ-ಸಂಸ್ಥೆಗಳು ಒಡ್ಡುತ್ತಿರುವ ಯಾವ ಆಮಿಷಗಳಿಗೂ ಒಳಗಾಗದೆ, ಅಮಾನುಷ ಪದ್ಧತಿಯ ಸೆರೆಯಾಳಾಗಿದ್ದಾರೆ.

ಹಸುಳೆಗಳನ್ನು ಕೊಲೆಮಾಡುವ ಈ ಪದ್ಧತಿಯು ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಫಲವೆಂದರೂ ಜನರು ಅದರಲ್ಲೂ ಪ್ರಮುಖವಾಗಿ ಮಹಿಳೆಯರು ಇಂತಹ ಯೋಜನೆಗಳಿಗೆ ಸ್ಪಂದಿಸದಿರಲು ಕಾರಣವೇನು ? ಸಮಸ್ಯೆಯು ಆಳವಾಗಿ ಬೇರೂರಿರುವುದು ವಾಸ್ತವಿಕ ಸಂಗತಿಯಾಗಿದ್ದರೂ, ಸರ್ಕಾರ ಹಮ್ಮಿಕೊಂಡ ಯೋಜನೆಗಳು ಅವುಗಳ ಕಾರ್ಯಾಚರಣೆಯಲ್ಲಿ ಕಂಡುಬರುತ್ತಿರುವ ವಿಧಾನ ವಿಳಂಬಗಳೇ ಮುಂತಾದವುಗಳು ಪ್ರಮುಖ ಕಾರಣಗಳೆನಿಸಿವೆ.

ಸೇಲಂನ ವಿವಿಧ ಜಿಲ್ಲೆಗಳಲ್ಲಿ ಸರ್ಕಾರ ವಿವಿಧ ಸಂಘ ಸಂಸ್ಥೆಗಳ ನೆರವಿನಿಂದ ಸಾಲದ ಸೌಲಭ್ಯ ಅನಾಥ ಮಕ್ಕಳ ಪಾಲನೆ, ಪೋಷಣೆ, ಬೇಡದ ಮಕ್ಕಳನ್ನು ಸರ್ಕಾರ ಸಾಕುವುದು, ದುಡಿಯುವ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳುವ ಸೌಲಭ್ಯ ಮುಂತಾದವುಗಳನ್ನು ಹಮ್ಮಿಕೊಂಡಿದೆ.

ಸೇಲಂನ ವಿವಿಧ ಕೇಂದ್ರಗಳಲ್ಲಿ ತೊಟ್ಟಿಲನ್ನು ಇಡಲಾಗಿದೆ. ಹೆಣ್ಣು ಮಕ್ಕಳನ್ನು ಸಾಕಿ ಬೆಳೆಸಲು ಇಷ್ಟಪಡದ ತಂದೆ-ತಾಯಂದಿರು ಅನಾಮಿಕರಾಗಿ ಹೆಣ್ಣು ಶಿಶುಗಳನ್ನು ತಂದು ಈ ತೊಟ್ಟಿಲಿನಲ್ಲಿ ಬಿಟ್ಟು ಹೋಗಬಹುದು. ಮುಂದೆ ಸರ್ಕಾರವೇ ಈ ಹೆಣ್ಣು ಮಕ್ಕಳನ್ನು ಸಾಕಿ ಬೆಳೆಸುವ ಹೊಣೆಯನ್ನು ವಹಿಸಿಕೊಳ್ಳುತ್ತದೆ. ತೊಟ್ಟಿಲನ್ನು ಇಟ್ಟ ಕೇಂದ್ರಗಳಲ್ಲಿ ಸೂಚನಾ ಫಲಕವನ್ನು ಸಹ ತೂಗಿ ಹಾಕಲಾಗಿದೆ.

ಆದರೆ ಸರ್ಕಾರದ ಈ ಯೋಜನೆಗೆ ನಿರೀಕ್ಷಿಸಿದ ಹಂತದಲ್ಲಿ ಪ್ರತಿಕ್ರಿಯೆ ದೊರೆಯಲಿಲ್ಲ. ತಮಿಳು ನಾಡಿನ ಸಮಾಜಕಲ್ಯಾಣಇಲಾಖೆಯ ಮಹಿಳಾ ಮಂತ್ರಿಯೋರ್ವರು ಈ ಯೋಜನೆಯ ಬಗ್ಗೆ ಭಾವೋದ್ವೇಗದಿಂದ ಮಾತನಾಡಿ ಜಾರಿ ಮಾಡಿದ್ದರೂ ಇದು ಸಾಕಷ್ಟು ಪ್ರಚಾರ ಪಡೆಯಲಿಲ್ಲ. ಸರ್ಕಾರ ತೊಟ್ಟಿಲನ್ನು ಇಟ್ಟ ವಿಚಾರ ಬಹಳಷ್ಟು ಜನರಿಗೆ ಮಾಹಿತಿಯೇ ಇಲ್ಲ. ಓದುಬರಹ ಬರದ ಜನರು ಈ ಸೂಚನಾ ಫಲಕಗಳನ್ನು ಓದಿ ಮನವರಿಕೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಈ ಯೋಜನೆಯು ಯಶಸ್ವಿಯಾಗದಿರಲು ಇದು ಒಂದು ಕಾರಣವಾದರೆ ಇನ್ನೊಂದು ಸರ್ಕಾರ ಅನಾಥ ಮಕ್ಕಳನ್ನು ಸಾಕುವ ವೈಖರಿ.

"ಬೇಡದ ಮಕ್ಕಳನ್ನು ನಮ್ಮ ಮಡಿಲಿಗೆ ಹಾಕಿ" ಎಂಬ ಘೋಷಣೆಯ ಈ ಯೋಜನೆ ಆರಂಭದಲ್ಲಿ ಉತ್ಸಾಹದಿಂದ ಪ್ರಾರಂಭವಾಯಿತು. ಜನರಿಗೆ ತಲುಪದಿರುವುದರ ಜೊತೆಗೆ ನಮ್ಮ ಮಕ್ಕಳು ಅನಾಥವಾಗಿ ಬೆಳೆಯುವುದರ ಬದಲಿಗೆ

ಅವುಗಳನ್ನು ಕೊಲೆಮಾಡುವುದೇ ಸರಿಯಾದ ಮಾರ್ಗ ವೆಂದು ಮಹಿಳೆಯರು ಭಾವಿಸಿದಂತಿದೆ.

ಕೂಲಿ ಮಾಡಿ ಬದುಕು ನೂಕುವ ಮಹಿಳೆಯರಿಗೆ ಹೆಣ್ಣು ಮಕ್ಕಳನ್ನು ಸಾಕಿ ಬೆಳಸಿ ದೊಡ್ಡವರನ್ನಾಗಿ ಮಾಡಿ ವರದಕ್ಷಿಣೆ ಹಣವನ್ನು ಜೋಡಿಸುವುದು ಕಲ್ಪನೆಗೂ ಮೀರಿದ್ದು, ಕೂಲಿ ಮಾಡಿ ಎಂಟು-ಹತ್ತು ರೂ. ಪಡೆಯುವ ಇವರು ಮಕ್ಕಳನ್ನು ಸಾಕುವುದು ಹೇಗೆ ಎಂಬ ದೈತ್ಯಾಕಾರದ ಪ್ರಶ್ನೆಯನ್ನು ಎದುರಿಸುತ್ತಾರೆ.

ಸೇಲಂ ಮಹಿಳೆಯರ ಆರ್ಥಿಕ ಸುಧಾರಣೆಗಾಗಿ ಸರ್ಕಾರ ವಿವಿಧ ರೀತಿಯ ಸಾಲದ ಸೌಲಭ್ಯವನ್ನು ವ್ಯವಸ್ಥೆ ಮಾಡಿತು. ಆದರೆ ಮಹಿಳೆಯರ ಪರವಾಗಿರುವ ಈ ಯೋಜನೆಗಳು ದುಷ್ಟ ಅಧಿಕಾರಶಾಹಿಯಿಂದಾಗಿ ತಲುಪ ಬೇಕಾದವರನ್ನು ತಲುಪಲೇ ಇಲ್ಲ. ತಲುಪಿದ್ದರೂ ವರ್ಷಗಳೇ ಉರುಳಿ ಹೋದವು. ಹೆಣ್ಣುಮಕ್ಕಳನ್ನು ಕೊಲೆಗೈಯದೇ ಸಾಕಿ ಬೆಳೆಸಿದರೆ, ಸಾಲ ಸಿಗುವುದೆಂಬ ಆಮಿಷವನ್ನು ಜನರಿಗೆ ನೀಡಿದ್ದರೂ, ಸಿಗುವ ಸಾಲದ ಮೊತ್ತ ಜೀವನ ಪೂರ್ತಿ ಪರ್ಯಾಯ ವ್ಯವಸ್ಥೆಯನ್ನು ನೀಡುವುದೇ ಎಂಬ ಪ್ರಶ್ನೆ ಅವರ ಮುಂದಿದ್ದುದು ಸಹಜವಾಗಿತ್ತು.

ಹೆಣ್ಣು ಶಿಶುವಿನ ಹತ್ಯೆಯನ್ನು ನಿಷೇಧಿಸುವ ಕಾನೂನನ್ನು ಸರ್ಕಾರ ಜಾರಿಗೆ ತಂದಿದೆ. ಇಂದು ಹೆಣ್ಣು ಶಿಶುಗಳನ್ನು ಹತ್ಯೆಗೈಯುವ ವ್ಯಕ್ತಿ ಕ್ರಿಮಿನಲ್ ಆರೋಪಕ್ಕೆ ಒಳಗಾಗುತ್ತಾರೆ. ಇಂತಹ ಅಪರಾಧ ಮಾಡಿದ ವ್ಯಕ್ತಿಯೊಬ್ಬನಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ನೀಡಿದೆ.

ಆದರೆ ವ್ಯಕ್ತಿಗಳ ಮೇಲಿನ ಒತ್ತಡ ಈ ರೀತಿಯ ನೈತಿಕ ಭಯ ಅನಿರೀಕ್ಷಿತವಾದ ತಿರುವುಗಳಿಗೆ ಅವಕಾಶವನ್ನು ತಂದೊಡ್ಡಿದೆ. ಹೆಣ್ಣು ಮಕ್ಕಳನ್ನು ಉಳಿಸಿಕೊಳ್ಳುವುದು, ಅಥವಾ ಸಾಯಿಸುವುದು ನಮ್ಮ ವೈಯಕ್ತಿಕ ಅಭಿಲಾಷೆ, ಅದರಲ್ಲಿ ಕೈಹಾಕಲು ನಿಮಗೆ ಯಾವ ಹಕ್ಕು ಇಲ್ಲವೆಂದು ಈ ಜನಾಂಗದ ಸದಸ್ಯರು ವಾದಿಸುತ್ತಾರೆ. ನಮ್ಮ ಜನಾಂಗದ ಈ ಪದ್ಧತಿಯ ಬಗ್ಗೆ ಅನಗತ್ಯವಾದ ಪ್ರಚಾರವನ್ನೂ ನೀಡಲಾಗುತ್ತದೆಯೆಂಬ ಆರೋಪವನ್ನು ಇಲ್ಲಿ ಕೆಲಸ ಮಾಡುವವರು ಎದುರಿಸುವುದು ಸರ್ವೆ ಸಾಮಾನ್ಯ.

ಇಪ್ಪತ್ತನೆಯ ಶತಮಾನದ ಈ ಆಧುನಿಕ ಯುಗದಲ್ಲಿ ಹೆಣ್ಣು ಶಿಶುಗಳನ್ನು ಅಮಾನುಷವಾಗಿ ಕೊಲೆಗೈಯುವುದು ದುಷ್ಟವೆನಿಸುವಷ್ಟೇ, ಹೆಣ್ಣು ಮಕ್ಕಳನ್ನು ಭ್ರೂಣಾವಸ್ಥೆಯಲ್ಲೇ ಕೊನೆಗೊಳಿಸುವುದು ಅಷ್ಟೇ ಅಮಾನುಷ. ಕಾಲ ಬದಲಾಗುತ್ತಿದ್ದರೂ ಸ್ತ್ರೀಯರನ್ನು ಶೋಷಿಸುವ ವ್ಯವಸ್ಥೆ ಮಾತ್ರ ಅವ್ಯಾಹತವಾಗಿ ಮುಂದುವರಿಯುತ್ತವೆ.

—ರಾಜೇಶ್ವರಿ ಹೆಚ್. ಎಸ್.

ಬದುಕು

—ಎಚ್. ಎಸ್. ಸಿ.

ಹೊಕ್ಕಳ ಬಳ್ಳಿ ಕತ್ತರಿಸಿ
ಕರುಳ ಕುಡಿ ಚಿಗುರಿಸುವ
ಆಸೆ–ಹೊತ್ತ
ನನಗೆ-ನಿಮಗೆ
ಬೇರು ಬಿಟ್ಟ ಸುಂದರ ಕನಸುಗಳ
ಕತ್ತರಿಸಿ-ಅಂಟಿಸುವ
ನೋವಿನ ಕೆಲಸ
ನಮ್ಮ ಒಡಲಾಳಗಳನ್ನರಿಯಲು,

ಮೂರ್ತ-ಅಮೂರ್ತಗಳ
ಶಂಕೆ-ಅಶಂಕೆಗಳ ಭಾವ ಮೀರಿ
ನಯನಗಳ ಮೊಗ್ಗು ಬಿಡಿಸಲು
ಗುಲಾಬಿ ಪಕ್ಕಳೆಗಳ ಅರಳಿಸಲು
ಕುದುರೆ ಹೆಜ್ಜೆಯ ಪತ್ತೆ ಹಚ್ಚಲು.
ಕೈ-ಚಾಚಿದಾಗ
ತೇವದ ಎಸಳು ಮರಳಲಿ
ಕಟ್ಟಿದ ಮನೆಗಳು
ಕನಸುಗಳು

ಅವಳ-ಅವನ ನಡುವೆ
ಶೃತಿ ಹಿಡಿವ ಆತ್ಮವಿಲ್ಲ
ಮನಸ್ಸು ಬರಿದು, ಬರಿದೋ ಬರಿದು

ನಾವು.
ಮುರಿದ ಏಣಿಯ ಪಾವಟಿಗೆಯಲ್ಲಿ ನಿಂತು
ಕಡಲ ಮೊರೆತ ಕೇಳಬೇಕು
ನವಿಲುಗರಿಗಳ ಕಣ್ಣ ಎಣಿಸಬೇಕು.

ಪ್ರಿಯರೇ,

1985ರ ನಂತರದಿಂದಲೂ 'ಮಾನಸ'ವನ್ನು ಕ್ರಮಬದ್ಧವಾಗಿ ನಿಮಗೆ ತಲುಪಿಸಲು ನಾವು ಪ್ರಯತ್ನಿಸಿದ್ದೇವೆ. ಇದು ಹೀಗೆಯೇ ಮುಂದುವರೆಯಬೇಕಾದರೆ, ಪತ್ರಿಕೆಯ ಚಂದಾಹಣವನ್ನು ಸ್ವಲ್ಪವಾದರೂ ಹೆಚ್ಚಿಸುವುದು ಅನಿವಾರ್ಯ ಅಗತ್ಯವಾಗಿದೆ. ಹೀಗಾಗಿ ಜನವರಿ 1993 ರಿಂದ ಪತ್ರಿಕೆಯ ಚಂದಾ ವಿವರ ಹೀಗಿರುತ್ತದೆ.

ವಾರ್ಷಿಕ ಚಂದಾ ರೂ. 25/-

ಆಜೀವ ಚಂದಾ : ರೂ. 300/-

ಓದುಗರು ಹಿಂದಿನಂತೆಯೇ ಸಹಕರಿಸುವಿರಾಗಿ ನಂಬುತ್ತೇವೆ.

—ಸಂಪಾದಕೀಯ ಮಂಡಳಿ

REGD. NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ.

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ :
" ಮಾ ನ ಸ "
ಪಂಚಾಯಿತಿ ರಸ್ತೆ,
ಕಾಡುಗೋಡಿ
ಬೆಂಗಳೂರು - 560 067